# ಅಧ್ಯಾಯ–IV

## ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಕಾರ್ಯವೈಖರಿ

# ಅಧ್ಯಾಯ – IV

## 4. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಕಾರ್ಯವೈಖರಿ

### ಪೀಠಿಕೆ

**4.1.** 31 ಮಾರ್ಚ್ 2019ರಲ್ಲಿದ್ದಂತೆ ವಿದ್ಯುತ್ ವಲಯವನ್ನು ಹೊರತುಪಡಿಸಿ ಇತರ ವಲಯಗಳಿಗೆ ಸಂಬಂಧಿತ ರಾಜ್ಯ ಸಾರ್ವಜನಿಕ ವಲಯದ 103 ಉದ್ದಿಮೆಗಳು ಇದ್ದವು. 1932–33 ಹಾಗೂ 2018–19ರ ಅವಧಿಯಲ್ಲಿ ಸ್ಥಾಪಿಸಲ್ಪಟ್ಟಿದ್ದಂತಹ ಈ ಸಾರ್ವಜನಿಕ ವಲಯ ಉದ್ದಿಮೆಗಳು 97 ಸಾರ್ವಜನಿಕ ವಲಯದ ಉದ್ದಿಮೆಗಳು (84 ಕಾರ್ಯನಿರತ ಹಾಗೂ 13 ಕಾರ್ಯಸ್ಥಗಿತ) ಹಾಗೂ ಆರು ಶಾಸನಬದ್ಧ ನಿಗಮಗಳನ್ನು[76] ಒಳಗೊಂಡಿದೆ. ಸಾರ್ವಜನಿಕ ವಲಯ ಉದ್ದಿಮೆಗಳು 11 ಅಧೀನ ಕಂಪನಿಗಳು[77] ಹಾಗೂ ನಾಲ್ಕು ಸಹವರ್ತಿ ಕಂಪನಿಗಳನ್ನೂ[78] ಒಳಗೊಂಡಿದೆ.

ರಾಜ್ಯ ಸರ್ಕಾರವು ಕಾಲಾನುಕಾಲಕ್ಕೆ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಈಕ್ವಿಟಿ, ಸಾಲಗಳು ಹಾಗೂ ಅನುದಾನಗಳು/ಸಹಾಯಧನದ ರೂಪದಲ್ಲಿ ಹಣಕಾಸಿನ ಬೆಂಬಲವನ್ನು ನೀಡುತ್ತದೆ. ಸಾರ್ವಜನಿಕ ವಲಯದ 103 ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಪೈಕಿ, ರಾಜ್ಯಸರ್ಕಾರವು ಸಾರ್ವಜನಿಕ ವಲಯದ 95 ಉದ್ದಿಮೆಗಳಲ್ಲಿ ಹಣಕಾಸನ್ನು ಹೂಡಿರುತ್ತದೆ ಮತ್ತು ಅಧೀನ ಕಂಪನಿಗಳು/ ಸಹವರ್ತಿ ಕಂಪನಿಗಳಾದ ಉಳಿದ ಎಂಟು[79] ಸಾವಉಗಳಲ್ಲಿ ರಾಜ್ಯ ಸರ್ಕಾರವು ಯಾವುದೇ ಹಣಕಾಸನ್ನೂ ಹೂಡಿಲ್ಲ.

***ರಾಜ್ಯದ ಆರ್ಥಿಕ ಸ್ಥಿತಿಗೆ ಕಾಣಿಕೆ***

**4.2.** ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟನ್ನು ರಾಜ್ಯದ ಒಟ್ಟು ದೇಶೀಯ ಉತ್ಪನ್ನಕ್ಕೆ ಹೋಲಿಸಿದಂತೆ ಒಂದು ಅನುಪಾತವು ರಾಜ್ಯದ ಆರ್ಥಿಕ ಸ್ಥಿತಿಯಲ್ಲಿನ ಚಟುವಟಿಕೆಗಳ ವಿಸ್ತಾರವನ್ನು ತೋರಿಸುತ್ತದೆ. ಮಾರ್ಚ್ 2019ಕ್ಕೆ ಅಂತ್ಯಗೊಂಡಂತಹ ಐದು ವರ್ಷಗಳ ಅವಧಿಗೆ, ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ವಹಿವಾಟು ಹಾಗೂ ರಾಜ್ಯದ ಒಟ್ಟು ದೇಶೀಯ ಉತ್ಪನ್ನದ ವಿವರಗಳನ್ನು ಈ ಕೆಳಗಿನ ಕೋಷ್ಟಕವು ಒದಗಿಸುತ್ತದೆ.

**ಕೋಷ್ಟಕ ಸಂಖ್ಯೆ 4.1: ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ವಹಿವಾಟು ಹಾಗೂ ಅದಕ್ಕೆ ಅನುಗುಣವಾಗಿ ರಾಜ್ಯದ ಒಟ್ಟು ದೇಶೀಯ ಉತ್ಪನ್ನದ ವಿವರಗಳು**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|---|
| 1 | ವಹಿವಾಟು | 13,877.81 | 15,415.08 | 15,193.35 | 17,523.27 | 19,879.41 |
| 2 | ರಾಜ್ಯದ ಒಟ್ಟು ದೇಶೀಯ ಉತ್ಪನ್ನ | 9,13,923.00 | 10,45,182.00 | 11,55,912.00 | 13,25,443.00 | 14,08,112.00 |
| 3 | ರಾಜ್ಯದ ಒಟ್ಟು ದೇಶೀಯ ಉತ್ಪನ್ನಕ್ಕೆ ಹೋಲಿಸಿದಲ್ಲಿ ಶೇಕಡಾವಾರು ವಹಿವಾಟು | 1.52 | 1.47 | 1.31 | 1.32 | 1.41 |

[76] ಕೆಎಸ್‌ಡಬ್ಲ್ಯೂಸಿ, ಕೆಎಸ್‌ಎಫ್‌ಸಿ, ಕೆಎಸ್‌ಆರ್‌ಟಿಸಿ, ಬಿಎಮ್‌ಟಿಸಿ, ಎನ್‌ಇಕೆಆರ್‌ಟಿಸಿ ಮತ್ತು ಎನ್‌ಡಬ್ಲ್ಯೂಕೆಆರ್‌ಟಿಸಿ.

[77] ಎನ್‌ಜಿಇಎಫ್‌ಎಚ್, ಎಂಸಿಎ, ಕೆಸಿಡಿಸಿಎಲ್, ಟಿಪಿಎಲ್, ಎಮ್‌ಟಿಸಿ, ಕೆಪಿಎಲ್, ಕೆಎಸ್‌ವಿಎಲ್, ಎಂಎಂಸಿಲ್, ಎಂಸಿಟಿ, ಬಿಪಿಆರ್‌ಆರ್‌ಡಿಸಿಎಲ್ ಮತ್ತು ಕೆಟಿಎಲ್.

[78] ಜೆಎಲ್‌ಆರ್, ಎಫ್‌ಕೆಎಲ್, ಕೆಎಎಂಸಿಪಿಎಲ್ ಮತ್ತು ಕೆಟಿಸಿಪಿಎಲ್.

[79] ಕೆಸಿಡಿಸಿಎಲ್, ಎಫ್‌ಕೆಎಲ್, ಕೆಎಎಂಸಿಪಿಎಲ್, ಕೆಟಿಸಿಪಿಎಲ್, ಟಿಪಿಎಲ್, ಬಿಪಿಆರ್‌ಆರ್‌ಡಿಸಿಎಲ್, ಎಮ್‌ಸಿಟಿ ಮತ್ತು ಕೆಎಸ್‌ವಿಎಲ್ (ರಾಜ್ಯ ಸರ್ಕಾರವು ಉಳಿದ ಏಳು ಅಧೀನ/ಸಹವರ್ತಿ ಕಂಪನಿಗಳಲ್ಲಿ ಈಕ್ವಿಟಿ/ಸಾಲ ರೂಪದಲ್ಲಿ ಹಣಕಾಸನ್ನು ಹೂಡಿರುತ್ತದೆ).

ಈ ಸಾರ್ವಜನಿಕ ವಲಯದ ಉದ್ದಿಮೆಗಳ ವಹಿವಾಟು ಶೇಕಡಾ 1.44ರಷ್ಟು ಇಳಿಕೆಯಾಗಿದ್ದಂತಹ 2016–17 ಸಾಲನ್ನು ಹೊರತುಪಡಿಸಿ, 2014–15ರಿಂದ 2018–19ರ ಅವಧಿಯಲ್ಲಿ ಹಿಂದಿನ ಸಾಲುಗಳಿಗೆ ಹೋಲಿಸಿದಂತೆ ಅವಿರತ ಹೆಚ್ಚಳವನ್ನು ದಾಖಲಿಸಿತ್ತು. 2015–16ರಲ್ಲಿ ವಹಿವಾಟಿನ ಹೆಚ್ಚಳವು ಶೇಕಡಾ 11.08, 2017–18ರಲ್ಲಿ ಶೇಕಡಾ 15.34 ಮತ್ತು 2018–19ರಲ್ಲಿ ಶೇಕಡಾ 13.45ರಷ್ಟು ಆಗಿತ್ತಾದಲ್ಲಿ, ರಾಜ್ಯದ ಒಟ್ಟು ದೇಶೀಯ ಉತ್ಪನ್ನದ ಹೆಚ್ಚಳವು ಶೇಕಡಾ 6.24ರಿಂದ ಶೇಕಡಾ 14.67ರ ವ್ಯಾಪ್ತಿಯಲ್ಲಿತ್ತು.

ಕಳೆದ ಐದು ವರ್ಷಗಳ ಅವಧಿಯಲ್ಲಿನ ಶೇಕಡಾ 11.41ರಷ್ಟರ[80] ಒಟ್ಟು ದೇಶೀಯ ಉತ್ಪನ್ನದ ಸಂಯೋಜಿತ ವಾರ್ಷಿಕ ಬೆಳವಣಿಗೆಗೆ ಪ್ರತಿಯಾಗಿ ಸಾರ್ವಜನಿಕ ವಲಯದ ಉದ್ದಿಮೆಗಳ ವಹಿವಾಟಿನ ಸಂಯೋಜಿತ ವಾರ್ಷಿಕ ಬೆಳವಣಿಗೆಯು ಶೇಕಡಾ 9.40ರಷ್ಟು[81] ದಾಖಲಾಗಿತ್ತು. ಇದು, ಒಟ್ಟು ದೇಶೀಯ ಉತ್ಪನ್ನಕ್ಕೆ ಹೋಲಿಸಿದಲ್ಲಿ, ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ವಹಿವಾಟು 2014–15ರಲ್ಲಿದ್ದಂತಹ ಶೇಕಡಾ 1.52ರಿಂದ 2018–19ರಲ್ಲಿ ಶೇಕಡಾ 1.41ಕ್ಕೆ ಇಳಿಕೆಯಾಗುವಲ್ಲಿ ಪರಿಣಮಿಸಿತ್ತು.

### ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಹೂಡಿಕೆ

**4.3.** ವಿವಿಧ ಕಾರಣಗಳಿಂದಾಗಿ ಖಾಸಗಿ ಕಂಪನಿಗಳು ಒದಗಿಸಲು ಸಿದ್ಧವಿರದ ಸೇವೆಗಳನ್ನು ರಾಜ್ಯ ಸರ್ಕಾರಕ್ಕೆ ಒದಗಿಸುವಲ್ಲಿ ಕಾರಣೀಭೂತವಾಗಿರುವಂತಹ ಕೆಲವು ಸಾರ್ವಜನಿಕ ವಲಯ ಉದ್ದಿಮೆಗಳಿವೆ. ಅಲ್ಲದೆಯೇ, ಸರ್ಕಾರವೂ ಸಹ ಖಾಸಗಿ ವಲಯ ಉದ್ದಿಮೆಗಳ ಜೊತೆಯಲ್ಲಿ ಒಂದು ಸ್ಪರ್ಧಾತ್ಮಕ ಪರಿಸರದಲ್ಲಿ ಕಾರ್ಯನಿರ್ವಹಿಸುವಂತಹ ಸಾರ್ವಜನಿಕ ವಲಯ ಉದ್ದಿಮೆಗಳ ಮೂಲಕ ಕೆಲವು ವ್ಯಾಪಾರವ್ಯವಹಾರ ವಿಭಾಗಗಳಲ್ಲಿ ಹೂಡಿಕೆಯನ್ನು ಮಾಡಿರುವುದು. ಆದ್ದರಿಂದ, ಈ ಸಾರ್ವಜನಿಕ ವಲಯ ಉದ್ದಿಮೆಗಳ ಸ್ಥಿತಿಗತಿಯನ್ನು ಎರಡು ಪ್ರಮುಖ ವರ್ಗೀಕರಣಗಳ ಅಡಿಯಲ್ಲಿ ಅಂದರೆ ಸಾಮಾಜಿಕ ವಲಯದ ಅಡಿಯಲ್ಲಿರುವವುಗಳು ಹಾಗೂ ಒಂದು ಸ್ಪರ್ಧಾತ್ಮಕ ಪರಿಸರದಲ್ಲಿ ಕಾರ್ಯನಿರ್ವಹಿಸುತ್ತಿರುವವುಗಳ ಅಡಿಯಲ್ಲಿ ವಿಶ್ಲೇಷಿಸಲಾಯಿತು. ಅಲ್ಲದೆಯೇ, ಈ ಎರಡೂ ಪ್ರವರ್ಗಗಳ ಅಡಿಯಲ್ಲಿ ಇರದ 53 ಸಾರ್ವಜನಿಕ ವಲಯ ಉದ್ದಿಮೆಗಳನ್ನು 'ಇತರವುಗಳ' ಅಡಿಯಲ್ಲಿ ವರ್ಗೀಕರಿಸಲಾಯಿತು. 31 ಮಾರ್ಚ್ 2019ರವರೆಗೆ ಈ 103 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಈಕ್ವಿಟಿ ಹಾಗೂ ದೀರ್ಘಾವಧಿ ಸಾಲಗಳ ರೂಪದಲ್ಲಿ ಮಾಡಲಾಗಿರುವಂತಹ ಹೂಡಿಕೆಯ (ಈಕ್ವಿಟಿ ಮತ್ತು ದೀರ್ಘಾವಧಿ ಸಾಲಗಳು) ವಿವರಗಳನ್ನು ***ಅನುಬಂಧ–1(ಬಿ)***ಯಲ್ಲಿ ವಿವರಿಸಲಾಗಿದೆ.

**4.4.** 31 ಮಾರ್ಚ್ 2019ರಲ್ಲಿದ್ದಂತೆ ಈ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಮಾಡಲಾಗಿದ್ದಂತಹ ಹೂಡಿಕೆಯ[82] (ಈಕ್ವಿಟಿ ಮತ್ತು ದೀರ್ಘಾವಧಿ ಸಾಲಗಳು) ವಲಯವಾರು ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 4.2: ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಹೂಡಿಕೆ**

| ಕ್ರಮ ಸಂಖ್ಯೆ | ವಲಯ | ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಹೂಡಿಕೆ (₹ ಕೋಟಿಯಲ್ಲಿ) | | |
|---|---|---|---|---|---|
| | | | ಈಕ್ವಿಟಿ | ದೀರ್ಘಾವಧಿ ಸಾಲಗಳು | ಒಟ್ಟು |
| 1 | ಸಾಮಾಜಿಕ ವಲಯ | 12 | 1,323.52 | 266.30 | 1,589.82 |
| 2 | ಸ್ಪರ್ಧಾತ್ಮಕ ಪರಿಸರದಲ್ಲಿನ ಸಾರ್ವಜನಿಕ ವಲಯ ಉದ್ದಿಮೆಗಳು | 38 | 2,256.48 | 3,906.06 | 6,162.54 |
| 3 | ಇತರವುಗಳು | 53 | 54,678.38 | 14,837.10 | 69,515.48 |
| | **ಒಟ್ಟು** | **103** | **58,258.38** | **19,009.46** | **77,267.84** |

[80] ಈ ರೀತಿಯಾಗಿ ಲೆಕ್ಕ ಹಾಕಲಾಯಿತು: $[1(14,08,112.00/9,13,923.00)^{1/1\times4} - 1]\times100$. ($r=n[(A/P)^{1/nt}-1]$ ಇದರಲ್ಲಿ r = ಬಡ್ಡಿಯ ದರ, n = ಸಂಯೋಜಿತ ಬಡ್ಡಿ ಷರತ್ತು, A = ಅಸಲಿಗೆ ಬಡ್ಡಿಯನ್ನು ಕೂಡುವುದು, P= ಅಸಲು ಮತ್ತು t = ಸಂಯೋಜನೆಗೊಳ್ಳುವ ಅವಧಿ).

[81] ಈ ರೀತಿಯಾಗಿ ಲೆಕ್ಕ ಹಾಕಲಾಯಿತು: $[1(19,879.40/13,877.81)^{1/1\times4} - 1]\times100$.

[82] ಇದು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಹಿಡುವಳಿ ಕಂಪನಿಗಳೂ ಸೇರಿದಂತೆ ಇತರವುಗಳನ್ನು ಒಳಗೊಂಡಿರುವುದು.

31 ಮಾರ್ಚ್ 2019ರಲ್ಲಿದ್ದಂತೆ, ಈ 103 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಒಟ್ಟಾರೆ ಹೂಡಿಕೆಯು (ಈಕ್ವಿಟಿ ಮತ್ತು ದೀರ್ಘಾವಧಿ ಸಾಲಗಳು) ₹ 77,267.84 ಕೋಟಿ ಆಗಿತ್ತು. ಹೂಡಿಕೆಯು ಈಕ್ವಿಟಿಯ ಕಡೆಗೆ ಶೇಕಡಾ 75.40ರಷ್ಟು ಹಾಗೂ ದೀರ್ಘಾವಧಿ ಸಾಲಗಳ ಕಡೆಗೆ ಶೇಕಡಾ 24.60ರಷ್ಟನ್ನು ಒಳಗೊಂಡಿತ್ತು. ನೀಡಲಾಗಿದ್ದಂತಹ ದೀರ್ಘಾವಧಿ ಸಾಲಗಳ ಪೈಕಿ ರಾಜ್ಯ ಸರ್ಕಾರದಿಂದ ಶೇಕಡಾ 14.27ರಷ್ಟು (₹ 2,713.22 ಕೋಟಿ) ಹಾಗೂ ಇತರೆ ಹಣಕಾಸು ಸಂಸ್ಥೆಗಳಿಂದ ಶೇಕಡಾ 85.73ರಷ್ಟು (₹ 16,296.24 ಕೋಟಿ) ಒಳಗೊಂಡಿತ್ತು.

## ಸಾರ್ವಜನಿಕ ವಲಯ ಉದ್ದಿಮೆಗಳಿಂದ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಬಂಡವಾಳ ಹಿಂತೆಗೆತ, ಪುನರ್-ರಚನೆ ಹಾಗೂ ಖಾಸಗೀಕರಣ

**4.5.** ರಾಜ್ಯ ಸರ್ಕಾರವು ರಾಜ್ಯದಲ್ಲಿನ ಸಾರ್ವಜನಿಕ ವಲಯ ಸುಧಾರಣೆಗಳು ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಖಾಸಗೀಕರಣದ ಬಗ್ಗೆ ಒಂದು ಸಮಗ್ರ ಕಾರ್ಯನೀತಿಯನ್ನು ಅನುಮೋದಿಸಿತು ಹಾಗೂ ಅಳವಡಿಸಿಕೊಂಡಿತು (ಫೆಬ್ರವರಿ 2001). ಅದರಂತೆಯೇ, ಸೆಪ್ಟಂಬರ್ 2019ರ ಅಂತ್ಯದಲ್ಲಿದ್ದಂತೆ ಏಳು ಕಂಪನಿಗಳನ್ನು[83] ವಿಸರ್ಜಿಸಲಾಯಿತು/ಇತರೆ ಕಂಪನಿಗಳ ಜೊತೆ ವಿಲೀನಗೊಳಿಸಲಾಯಿತು. ಮುಂದುವರೆದು, 103 ಸಾವಉಗಳ ಪೈಕಿ, ಸರ್ಕಾರವು 13 ಕಾರ್ಯಸ್ಥಗಿತ ಕಂಪನಿಗಳನ್ನು[84] ಮುಚ್ಚುವ ಸಲುವಾಗಿ ಆದೇಶಗಳನ್ನು ನೀಡಿತು.

## ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಆಯವ್ಯಯ ಬೆಂಬಲ

**4.6.** ರಾಜ್ಯ ಸರ್ಕಾರವು ವಾರ್ಷಿಕ ಆಯವ್ಯಯದ ಮೂಲಕ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ವಿವಿಧ ರೀತಿಗಳಲ್ಲಿ ಹಣಕಾಸಿನ ಬೆಂಬಲವನ್ನು ಒದಗಿಸಿತು. 2018-19ಕ್ಕೆ ಅಂತ್ಯಗೊಂಡಂತಹ ಮೂರು ವರ್ಷಗಳಿಗೆ ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಂಬಂಧಿಸಿದಂತೆ ಈಕ್ವಿಟಿ, ಸಾಲಗಳು ಅನುದಾನಗಳು/ಸಹಾಯಾನುಧನಗಳು ಲೆಕ್ಕಪತ್ರ ಪುಸ್ತಕ/ದಾಖಲೆಗಳಿಂದ ತೆಗೆದುಹಾಕಲಾದಂತಹ (ರಿಟನ್ ಆಫ್) ಸಾಲಗಳು, ಮನ್ನಾ ಮಾಡಲಾದಂತಹ ಬಡ್ಡಿ, ನೀಡಲಾದ ಖಾತರಿಗಳು ಹಾಗೂ ಖಾತರಿ ಬದ್ಧತೆಗಳ ಸಂಕ್ಷಿಪ್ತ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 4.3: ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ವಿದ್ಯುತ್ ವಲಯವನ್ನು ಹೊರತುಪದಿಸಿ) ಆಯವ್ಯಯ ಬೆಂಬಲಕ್ಕೆ ಸಂಬಂಧಿತ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2016-17 | | 2017-18 | | 2018-19 | |
|---|---|---|---|---|---|---|---|
| | | ಸಾವಉಗಳ ಸಂಖ್ಯೆ | ಮೊತ್ತ | ಸಾವಉಗಳ ಸಂಖ್ಯೆ | ಮೊತ್ತ | ಸಾವಉಗಳ ಸಂಖ್ಯೆ | ಮೊತ್ತ |
| 1 | ಆಯವ್ಯಯದಿಂದ ಈಕ್ವಿಟಿ ಬಂಡವಾಳ ಬಿಡುಗಡೆ | 11 | 4,220.80 | 13 | 4,100.37 | 20 | 6,634.99 |
| 2 | ಆಯವ್ಯಯದಿಂದ ಸಾಲಗಳನ್ನು ನೀಡಿದ್ದುದು | 2 | 44.70 | 3 | 356.33 | 4 | 984.21 |
| 3 | ಆಯವ್ಯಯದಿಂದ ಅನುದಾನಗಳು/ ಸಹಾಯಾನು-ದಾನಗಳು | 29 | 9,704.02 | 30 | 10,187.15 | 37 | 8,854.54 |
| **4** | **ಒಟ್ಟಾರೆ ಬಿಡುಗಡೆ** | **-** | **13,969.52** | **-** | **14,643.85** | | **16,473.74** |

[83] ಕರ್ನಾಟಕ ಟಂಗ್‌ಸ್ಟನ್ ಮಾಲಿ ಲಿಮಿಟೆಡ್, ಕರ್ನಾಟಕ ಆಗ್ರೋ ಪ್ರೋಟಿನ್ಸ್ ಲಿಮಿಟೆಡ್, ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತ, ಚಾಮುಂಡಿ ಮೆಷಿನ್ ಟೂಲ್ಸ್ ಲಿಮಿಟೆಡ್ ಹಾಗೂ ಕರ್ನಾಟಕ ರಾಜ್ಯ ಜವಳಿ ನಿಯಮಿತ.

[84] ಎಲ್ಲಾ ಕಾರ್ಯಸ್ಥಗಿತ ಕಂಪನಿಗಳು *ಅನುಬಂಧ-1(ಬಿ)* ಪ್ರಕಾರ ಆಗಿರುತ್ತವೆ. ಕಾರ್ಯಸ್ಥಗಿತ ಸಾವಉಗಳಲ್ಲಿ ಒಂದಾದ ಎನ್‌ಜಿಇಎಫ್‌ನ ಮುಚ್ಚುವಿಕೆಯನ್ನು ಹಿಂಪಡೆಯುವ ಆದೇಶಗಳನ್ನು ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯವು ಜೂನ್ 2017ರಲ್ಲಿ ಒಪ್ಪಿಕೊಂಡಿದೆ.

| ಕ್ರಮ ಸಂಖ್ಯೆ | ವಿವರಗಳು | 2016–17 | | 2017–18 | | 2018–19 | |
|---|---|---|---|---|---|---|---|
| | | ಸಾಲಗಳ ಸಂಖ್ಯೆ | ಮೊತ್ತ | ಸಾಲಗಳ ಸಂಖ್ಯೆ | ಮೊತ್ತ | ಸಾಲಗಳ ಸಂಖ್ಯೆ | ಮೊತ್ತ |
| 5 | ಸಾಲಗಳು ಮತ್ತು ಬಡ್ಡಿಯನ್ನು ಮನ್ನಾ ಮಾಡಿದ್ದುದು | – | – | – | – | – | – |
| 6 | ನೀಡಲಾಗಿರುವ ಖಾತರಿಗಳು | 11 | 2,116.32 | 8 | 3,464.19 | 7 | 2,999.11 |
| 7 | ಕ್ರೋಡೀಕೃತ ಖಾತರಿ ಬದ್ಧತೆ | 15 | 7,796.23 | 13 | 14,303.94 | 13 | 14,668.06 |

2018–19ಕ್ಕೆ ಅಂತ್ಯಗೊಂಡಂತಹ ಕಳೆದ ಐದು ವರ್ಷಗಳಿಗೆ ಈಕ್ವಿಟಿ, ಸಾಲಗಳು, ಅನುದಾನಗಳು ಹಾಗೂ ಸಹಾಯಾನುದಾನಗಳ ಕಡೆಗೆ ಆಯವ್ಯಯದಿಂದ ಮಾಡಲಾಗಿರುವ ಬಿಡುಗಡೆಯ ಬಗ್ಗೆ ವಿವರಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ನೀಡಲಾಗಿದೆ:

**ರೇಖಾಚಿತ್ರ ಸಂಖ್ಯೆ 4.1: ಈಕ್ವಿಟಿ, ಸಾಲಗಳು, ಅನುದಾನಗಳು ಹಾಗೂ ಸಹಾಯಾನುಧಾನಗಳ ಕಡೆಗೆ ಆಯವ್ಯಯದಿಂದ ಬಿಡುಗಡೆ**

**(₹ ಕೋಟಿಯಲ್ಲಿ)**




2018–19ಕ್ಕೆ ಅಂತ್ಯಗೊಂಡಂತಹ ಐದು ವರ್ಷಗಳ ಅವಧಿಗೆ ಈಕ್ವಿಟಿ, ಸಾಲಗಳು, ಅನುದಾನಗಳು ಹಾಗೂ ಸಹಾಯಾನುದಾನಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಆಯವ್ಯಯ ಬೆಂಬಲವು ಹೆಚ್ಚಳಗೊಂಡಿರುವ ಪ್ರವೃತ್ತಿಯಲ್ಲಿತ್ತು. 2014–15ರಲ್ಲಿನ ₹ 9,663.75 ಕೋಟಿ ಮೊತ್ತದಷ್ಟು ಆಯವ್ಯಯ ಬೆಂಬಲವು 2018–19 ಸಾಲಿನಲ್ಲಿ ₹ 16,473.74 ಕೋಟಿ ಮೊತ್ತಕ್ಕೆ ಹೆಚ್ಚಳಗೊಂಡಿತ್ತು. 2018–19ರಲ್ಲಿನ ₹ 16,473.74 ಕೋಟಿ ಮೊತ್ತದಷ್ಟು ಆಯವ್ಯಯ ಬೆಂಬಲವು ₹ 6,634.99 ಕೋಟಿ ಮೊತ್ತದಷ್ಟು ಈಕ್ವಿಟಿ, ₹ 984.21 ಕೋಟಿ ಮೊತ್ತದಷ್ಟು ಸಾಲಗಳು ಹಾಗೂ ₹ 8,854.54 ಕೋಟಿ ಮೊತ್ತದಷ್ಟು ಅನುದಾನಗಳು ಹಾಗೂ ಸಹಾಯಾನುದಾನಗಳನ್ನು ಒಳಗೊಂಡಿತ್ತು.

## ಸಾಲಗಳಿಗೆ ನೀಡಿದ ಖಾತರಿಗಳು ಹಾಗೂ ಬಾಕಿಯಿರುವ ಖಾತರಿ ಕಮಿಷನ್‌ಗಳ ಸ್ಥಿತಿಗತಿ

**4.7.** ಸಾರ್ವಜನಿಕ ವಲಯ ಉದ್ದಿಮೆಗಳು ಬ್ಯಾಂಕುಗಳಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಹಣಕಾಸಿನ ನೆರವನ್ನು ಪಡೆಯುವುದನ್ನು ಸಾಧ್ಯಗೊಳಿಸುವ ಸಲುವಾಗಿ, ರಾಜ್ಯ ಸರ್ಕಾರವು ಸರ್ಕಾರಿ ಖಾತರಿಗಳ ಮೇಲೆ ಕರ್ನಾಟಕ ಸರ್ಕಾರದ ಪರಾಮಾವಧಿ ಅಧಿನಿಯಮ, 1999ರ (2002ರ ನಿಬಂಧನೆ 15ರ ಮೂಲಕ ತಿದ್ದುಪಡಿ ಮಾಡಲ್ಪಟ್ಟಂತೆ) ಅಡಿಯಲ್ಲಿ ಖಾತರಿಯನ್ನು ನೀಡುವುದು. ಸರ್ಕಾರವು ಖಾತರಿ ಕಮಿಷನ್ನಿನ ರೂಪದಲ್ಲಿ ಕನಿಷ್ಠ ಶೇಕಡಾ ಒಂದನ್ನು ವಿಧಿಸುವುದು, ಅದನ್ನು ಯಾವುದೇ

ಸಂದರ್ಭದಲ್ಲಿಯೂ ಮನ್ನಾ ಮಾಡಲಾಗುವುದಿಲ್ಲ. 2016–17ರಲ್ಲಿದ್ದಂತಹ ₹ 7,796.23 ಕೋಟಿ ಮೊತ್ತದಷ್ಟು ಖಾತರಿ ಬದ್ಧತೆಯು 2017–18ರಲ್ಲಿ ₹ 14,303.94 ಕೋಟಿಗೆ ಹಾಗೂ 2018–19ರಲ್ಲಿ ₹ 14,668.06 ಕೋಟಿಗೆ ಹೆಚ್ಚಳಗೊಂಡಿತು. 2018–19ರಲ್ಲಿ ಹತ್ತು ಸಾರ್ವಜನಿಕ ವಲಯ ಉದ್ಯಮಗಳು ಖಾತರಿ ಶುಲ್ಕವಾಗಿ ₹ 148.53 ಕೋಟಿ ಪಾವತಿಸಿದ್ದವು. 31 ಮಾರ್ಚ್ 2019ರಲ್ಲಿದ್ದಂತೆ ಬಾಕಿಯಿದ್ದಂತಹ ಕ್ರೋಢೀಕೃತ ಖಾತರಿ ಶುಲ್ಕಗಳು ಅಥವಾ ಕಮಿಷನ್ನು ₹ 39.64 ಕೋಟಿ[85] ಆಗಿತ್ತು.

## ಹಣಕಾಸು ಲೆಕ್ಕಪತ್ರಗಳ ಜೊತೆಯಲ್ಲಿ ಸಮನ್ವಯಗೊಳಿಸುವಿಕೆ

**4.8.** ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ದಾಖಲೆಗಳ ಅನುಸಾರ ಬಾಕಿಯಿದ್ದಂತಹ ಈಕ್ವಿಟಿ, ಸಾಲಗಳು ಮತ್ತು ಖಾತರಿಗಳು ರಾಜ್ಯದ ಹಣಕಾಸು ಲೆಕ್ಕಪತ್ರಗಳಲ್ಲಿ ಕಂಡುಬರುವಂತಹ ಅಂಕಿಸಂಖ್ಯೆಗಳ ಜೊತೆಯಲ್ಲಿ ತಾಳೆ ಹೊಂದತಕ್ಕದ್ದು. ಅಂತಹ ಅಂಕಿಸಂಖ್ಯೆಗಳು ಒಂದು ವೇಳೆ ತಾಳೆ ಹೊಂದದಿದ್ದಲ್ಲಿ, ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು ಹಾಗೂ ಹಣಕಾಸು ಇಲಾಖೆಯು ಅಂತಹ ವ್ಯತ್ಯಾಸಗಳನ್ನು ಸಮನ್ವಯಗೊಳಿಸತಕ್ಕದ್ದು. ಈ ನಿಟ್ಟಿನಲ್ಲಿ 31 ಮಾರ್ಚ್ 2019ರಲ್ಲಿದ್ದಂತೆ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 4.4: ಹಣಕಾಸು ಲೆಕ್ಕಪತ್ರಗಳು ಹಾಗೂ ಅವುಗಳಿಗೆ ಅನುಗುಣವಾಗಿ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ದಾಖಲೆಗಳ ಪ್ರಕಾರ ಬಾಕಿಯಿರುವ ಈಕ್ವಿಟಿ, ಸಾಲಗಳು ಮತ್ತು ಖಾತರಿಗಳು.**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಬಾಕಿಯಿರುವುದು | ಹಣಕಾಸು ಇಲಾಖೆಯ ಲೆಕ್ಕಪತ್ರಗಳ ಅನುಸಾರ ಮೊತ್ತ^ | ಸಾರ್ವಜನಿಕ ವಲಯ ಉದ್ದಿಮೆಗಳ ದಾಖಲೆಗಳ ಅನುಸಾರ ಮೊತ್ತ | ವ್ಯತ್ಯಾಸ |
|---|---|---|---|---|
| | (1) | (2) | (3) | (4 = 2–3) |
| 1 | ಈಕ್ವಿಟಿ | 46,002.60 | 57,443.74 | (–) 11,441.14 |
| 2 | ಸಾಲಗಳು | 2,710.12 | 2,713.22 | (–) 3.10 |
| 3 | ಖಾತರಿಗಳು | 16,771.05 | 14,668.06 | 2,102.99 |

^ **ಮೂಲ:** ಹಣಕಾಸು ಲೆಕ್ಕಪತ್ರಗಳಲ್ಲಿನ ತಃಖ್ತೆ ಸಂಖ್ಯೆ 18 (ಸಾಲಗಳು), 19 (ಈಕ್ವಿಟಿ) ಮತ್ತು 20 (ಖಾತರಿಗಳು).

ಸಾರ್ವಜನಿಕ ವಲಯದ 87 ಉದ್ದಿಮೆಗಳಿಗೆ ಸಂಬಂಧಿಸಿದಂತೆ ***ಅನುಬಂಧ–2(ಬಿ)***ಯಲ್ಲಿ ತೋರಿಸಿರುವಂತೆ ವ್ಯತ್ಯಾಸಗಳಿದ್ದವು. ಒಂಭತ್ತು ಕಂಪನಿಗಳಿಗೆ[86] ಸಂಬಂಧಿಸಿದಂತೆ ಈಕ್ವಿಟಿ ಹಾಗೂ ಸಾಲಗಳಲ್ಲಿನ ಬೃಹತ್ ಪ್ರಮಾಣದ ವ್ಯತ್ಯಾಸಗಳನ್ನು ಗಮನಿಸಲಾಯಿತು. ಸರ್ಕಾರ ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳು ವ್ಯತ್ಯಾಸಗಳನ್ನು ಒಂದು ಕಾಲಮಿತಿಯೊಳಗೆ ಸಮನ್ವಯಗೊಳಿಸುವ ಸಲುವಾಗಿ ಸದೃಡ ಕ್ರಮಗಳನ್ನು ತೆಗೆದುಕೊಳ್ಳಬೇಕು ಹಾಗೂ ವ್ಯತ್ಯಾಸಗಳನ್ನು ಸರಿಪಡಿಸುವ/ಹೊಂದಾಣಿಕೆ ಮಾಡುವ ಸಲುವಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

## ಸಾರ್ವಜನಿಕ ವಲಯ ಉದ್ದಿಮೆಗಳಿಂದ (ವಿದ್ಯುತ್ ವಲಯಗಳನ್ನು ಹೊರತುಪಡಿಸಿ) ಲೆಕ್ಕಪತ್ರಗಳ ಸಲ್ಲಿಕೆ

**4.9** ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 96(1) ಅನುವುಗಳ ಅನುಸಾರ ಕಂಪನಿಗಳ ಪ್ರತಿಯೊಂದು ಸಾಲಿನ ಹಣಕಾಸು ತಃಖ್ತೆಗಳನ್ನು ಸಂಬಂಧಿತ ಹಣಕಾಸು ಸಾಲು ಅಂತ್ಯಗೊಂಡ

---

[85] ಪ್ರಧಾನವಾಗಿ ಬಾಕಿಗಳನ್ನು ಹೊಂದಿದ್ದ ಸಾರ್ವಜನಿಕ ವಲಯ ಉದ್ದಿಮೆಗಳೆಂದರೆ ಕೆಎಫ್‌ಸಿಎಸ್‌ಸಿಎಲ್ (₹ 17.76 ಕೋಟಿ), ಆರ್‌ಜಿಎಚ್‌ಸಿಎಲ್ (₹ 10.24 ಕೋಟಿ). ಉಳಿದ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಬಾಕಿಗಳು ₹ 11.64 ಕೋಟಿಯಷ್ಟಿದ್ದವು.

[86] ಈಕ್ವಿಟಿಗೆ ಸಂಬಂಧಿಸಿದಂತೆ ಕೆಎಮ್‌ಡಿಸಿ, ಕೆಎಸ್‌ಐಐಡಿಸಿ, ಕೆಬಿಜೆಎನ್‌ಎಲ್, ಕೆಎನ್‌ಎನ್‌ಎಲ್, ಸಿಎನ್‌ಎನ್‌ಎಲ್, ವಿಜೆಎನ್‌ಎಲ್ (***ಅನುಬಂಧ–2(ಬಿ)*** ಅಡಿಯಲ್ಲಿನ ಕ್ರಮ ಸಂಖ್ಯೆ ಎ17, ಎ18, ಎ30, ಎ31, ಎ32 ಮತ್ತು ಎ33) ಹಾಗೂ ಸಾಲಗಳಿಗೆ ಸಂಬಂಧಿಸಿದಂತೆ ಆರ್‌ಜಿಹೆಚ್‌ಸಿಎಲ್, ವಿಜೆಎನ್‌ಎಲ್ ಮತ್ತು ಎಮ್‌ಪಿಎಮ್ (***ಅನುಬಂಧ–2(ಬಿ)*** ಅಡಿಯಲ್ಲಿನ ಕ್ರಮ ಸಂಖ್ಯೆ ಎ28, ಎ33 ಮತ್ತು ಎ50).

ದಿನಾಂಕದಿಂದ ಆರು ತಿಂಗಳುಗಳ ಒಳಗೆ ಅಂದರೆ ಸೆಪ್ಟೆಂಬರ್ ಅಂತ್ಯದ ವೇಳೆಗೆ ಅಂತಿಮ ರೂಪಕ್ಕೆ ತರುವ ಅಗತ್ಯತೆ ಇರುತ್ತದೆ. ಆ ರೀತಿ ಮಾಡಲು ವಿಫಲಗೊಂಡಲ್ಲಿ ಅಧಿನಿಯಮದ ಪರಿಚ್ಛೇದ 99ರ ಅಡಿಯಲ್ಲಿ ದಂಡದ ಅನುವುಗಳನ್ನು ಆಕರ್ಷಿಸಬಹುದು. ಅದೇ ರೀತಿಯಲ್ಲಿ, ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ, ಅವುಗಳ ಸಂಬಂಧಿತ ಅಧಿನಿಯಮದ ಅನುವುಗಳ ಅನುಸಾರ ಅವುಗಳ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರಲಾಗುವುದು, ಲೆಕ್ಕಪರಿಶೋಧನೆಗೆ ಒಳಪಡಿಸಲಾಗುವುದು ಹಾಗೂ ಶಾಸಕಾಂಗದ ಮುಂದೆ ಮಂಡಿಸಲಾಗುವುದು.

30 ಸೆಪ್ಟೆಂಬರ್ 2019ರ ವೇಳೆಗೆ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳು ಸಾಧಿಸಿದ್ದ ಪ್ರಗತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕವು ಒದಗಿಸುವುದು:

**ಕೋಷ್ಟಕ ಸಂಖ್ಯೆ 4.5: ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವುದಕ್ಕೆ ಸಂಬಂಧಿಸಿದಂತೆ ಸ್ಥಿತಿಗತಿ**

| ಕ್ರಮ ಸಂಖ್ಯೆ | ವಿವರಗಳು | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|
| 1 | ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | 69 | 70 | 79 | 83 | 90 |
| 2 | ಪ್ರಸಕ್ತ ಸಾಲಿನಲ್ಲಿ ಅಂತಿಮ ರೂಪಕ್ಕೆ ತರಲಾದ ಲೆಕ್ಕಪತ್ರಗಳ ಒಟ್ಟು ಸಂಖ್ಯೆ | 68 | 61 | 66 | 66 | 95 |
| 3 | ಪ್ರಸಕ್ತ ಸಾಲಿಗೆ ಸಂಬಂಧಿಸಿದಂತೆ ಅಂತಿಮ ರೂಪಕ್ಕೆ ತರಲಾದ ಲೆಕ್ಕಪತ್ರಗಳ ಸಂಖ್ಯೆ | 33 | 26 | 27 | 23 | 40 |
| 4 | ಹಿಂದಿನ ಸಾಲುಗಳಿಗೆ ಸಂಬಂಧಿಸಿದಂತೆ ಅಂತಿಮ ರೂಪಕ್ಕೆ ತರಲಾದ ಲೆಕ್ಕಪತ್ರಗಳ ಸಂಖ್ಯೆ | 35 | 35 | 39 | 43 | 55 |
| 5 | ಅಂತಿಮ ರೂಪಕ್ಕೆ ತರುವಲ್ಲಿ ಬಾಕಿಗಳಲ್ಲಿರುವ ಲೆಕ್ಕಪತ್ರಗಳ ಸಂಖ್ಯೆ | 43 | 54 | 67 | 79 | 78 |
| 6 | ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ ಬಾಕಿಗಳನ್ನು ಹೊಂದಿರುವ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | 37 | 44 | 51 | 60 | 50 |
| 7 | ಬಾಕಿಗಳ ವಿಸ್ತಾರ (ಸಂಖ್ಯೆ ವರ್ಷಗಳಲ್ಲಿ) | 1 ರಿಂದ 2 ವರ್ಷಗಳು | 1 ರಿಂದ 3 ವರ್ಷಗಳು | 1 ರಿಂದ 4 ವರ್ಷಗಳು | 1 ರಿಂದ 5 ವರ್ಷಗಳು | 1 ರಿಂದ 6 ವರ್ಷಗಳು |

ಪ್ರಸಕ್ತ ಸಾಲಿನಲ್ಲಿ 75 ಸಾವಉಗಳ 95 ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರಲಾಗಿತ್ತು ಹಾಗೂ ಅವುಗಳು ಐದು ಶಾಸನಬದ್ಧ ನಿಗಮಗಳ[87] ಐದು ಲೆಕ್ಕಪತ್ರಗಳನ್ನು ಒಳಗೊಂಡಿದ್ದವು. ಬಾಕಿಗಳಲ್ಲಿದ್ದಂತಹ ಲೆಕ್ಕಪತ್ರಗಳ ಸಂಖ್ಯೆಯು 43ರಿಂದ (2014-15) 78ಕ್ಕೆ (2018-19) ಹೆಚ್ಚಳಗೊಂಡಿದ್ದವು. ಲೆಕ್ಕಪತ್ರಗಳ 78 ಬಾಕಿಗಳ ಪೈಕಿ, 71 ಲೆಕ್ಕಪತ್ರಗಳು ಕಾರ್ಯನಿರತ ಸರ್ಕಾರಿ ಕಂಪನಿಗಳಿಗೆ ಸೇರಿದ್ದವು, ಇವುಗಳಿಗೆ ಸಂಬಂಧಿಸಿದಂತೆ ಬಾಕಿಗಳು ಒಂದರಿಂದ ಆರು ವರ್ಷಗಳವರೆಗೆ ಆಗಿದ್ದವು. ಬಾಕಿಗಳು ಆರು ಶಾಸನಬದ್ಧ ನಿಗಮಗಳ ಏಳು ಲೆಕ್ಕಪತ್ರಗಳನ್ನು ಒಳಗೊಂಡಿದ್ದವು.

ಈ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆಯ ಹಾಗೂ ನಿರ್ದಿಷ್ಟ ಅವಧಿಯ ಒಳಗೆ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವ ಹಾಗೂ ಅಳವಡಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಆಡಳಿತಾತ್ಮಕ ಇಲಾಖೆಗಳು ಜವಾಬ್ದಾರಿಗಳನ್ನು ಹೊಂದಿರುವವು. ಪ್ರಧಾನ ಮಹಾಲೇಖಾಪಾಲರು/ಮಹಾಲೇಖಾಪಾಲರು ರಾಜ್ಯ ಸರ್ಕಾರದೊಂದಿಗೆ/ಸಂಬಂಧಿತ ಆಡಳಿತಾತ್ಮಕ ಇಲಾಖೆಗಳೊಂದಿಗೆ ನಿಯತಕಾಲಿಕವಾಗಿ ಲೆಕ್ಕಪತ್ರಗಳ ಬಾಕಿಗಳನ್ನು ಕೊನೆಗೊಳಿಸುವ ವಿಷಯವನ್ನು ಕೈಗೆತ್ತಿಕೊಂಡಿದ್ದರು.

**4.10.** ರಾಜ್ಯ ಸರ್ಕಾರವು 50 ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಪೈಕಿ 27ರಲ್ಲಿ ಸರ್ಕಾರವು ಪ್ರಸಕ್ತ ಸಾಲುಗಳಲ್ಲಿ ₹ 6,671.84 ಕೋಟಿ ನಿವ್ವಳ ಮೊತ್ತವನ್ನು

[87] ಕೆಎಸ್‌ಡಬ್ಲ್ಯೂಸಿಯು 2018-19ರಲ್ಲಿ ಯಾವುದೇ ಲೆಕ್ಕಪತ್ರಗಳನ್ನೂ ಅಂತಿಮಗೊಳಿಸಲಿಲ್ಲ.

ಹೂಡಿಕೆ ಮಾಡಿತ್ತು, ***ಅನುಬಂಧ–3***ರಲ್ಲಿ ವಿವರಿಸಿರುವಂತೆ ಅವುಗಳ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತಂದಿರಲಿಲ್ಲ. ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿನ ಹಾಗೂ ಅವುಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸುವಲ್ಲಿನ ಅನುಪಸ್ಥಿತಿಯಲ್ಲಿ, ಮಾಡಲಾದಂತಹ ಹೂಡಿಕೆಗಳು ಹಾಗೂ ಭರಿಸಲಾದಂತಹ ವೆಚ್ಚಗಳನ್ನು ಸಮರ್ಪಕವಾದಂತಹ ರೀತಿಯಲ್ಲಿ ಲೆಕ್ಕವನ್ನಿಡಲಾಗಿತ್ತೇ ಹಾಗೂ ಯಾವ ಉದ್ದೇಶಕ್ಕಾಗಿ ಮೊತ್ತವನ್ನು ಹೂಡಿಕೆ ಮಾಡಲಾಗಿತ್ತೋ ಅಂತಹ ಉದ್ದೇಶವು ಈಡೇರಿತೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಈ ರೀತಿಯಾಗಿ, ಅಂತಹ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಸರ್ಕಾರದ ಹೂಡಿಕೆಯು ರಾಜ್ಯ ಶಾಸಕಾಂಗದ ನಿಯಂತ್ರಣದ ಹೊರಗೆ ಉಳಿದುಕೊಂಡಿತ್ತು.

**4.11.** ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ ಬಾಕಿಗಳಿದ್ದವು. 13 ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, ನಾಲ್ಕು[88] ಉದ್ದಿಮೆಗಳು ಸಮಾಪನ ಪ್ರಕ್ರಿಯೆಯ ಅಡಿಯಲ್ಲಿದ್ದವು, ಅವುಗಳ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಹದಿನಾಲ್ಕರಿಂದ ಹದಿನಾರು ವರ್ಷಗಳವರೆಗೆ ಬಾಕಿಗಳಿದ್ದವು. ಉಳಿದ ಒಂಭತ್ತು ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಆರು[89] ಸಾರ್ವಜನಿಕ ವಲಯ ಉದ್ದಿಮೆಗಳು ಲೆಕ್ಕಪತ್ರಗಳ ಬಾಕಿಗಳನ್ನು ಹೊಂದಿರಲಿಲ್ಲ, ಉಳಿದ ಮೂರು (ಎನ್‌ಜಿಇಎಫ್, ಬಿಎಸ್‌ಆರ್‌ಸಿಎಲ್ ಮತ್ತು ಎಮ್‌ಎಮ್‌ಸಿಎಲ್) ಸಾರ್ವಜನಿಕ ವಲಯ ಉದ್ದಿಮೆಗಳು ಹದಿನಾರು ವರ್ಷಗಳ (ಎನ್‌ಜಿಇಎಫ್), ಐದು ವರ್ಷಗಳ (ಬಿಎಸ್‌ಆರ್‌ಸಿಎಲ್) ಮತ್ತು ಒಂದು ವರ್ಷದ (ಎಮ್‌ಎಮ್‌ಸಿಎಲ್) ಲೆಕ್ಕಪತ್ರಗಳ ಬಾಕಿಗಳನ್ನು ಹೊಂದಿದ್ದವು. ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿನ ಬಾಕಿಗಳ ಸ್ಥಿತಿಗತಿಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 4.6: ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿನ ಬಾಕಿಗಳ ಸ್ಥಿತಿಗತಿ**

| ಕ್ರಮ ಸಂಖ್ಯೆ | ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆ | ಲೆಕ್ಕಪತ್ರಗಳ ಬಾಕಿಗಳು ಸಂಬಂಧಿಸಿದ್ದ ಅವಧಿ | ಲೆಕ್ಕಪತ್ರಗಳು ಬಾಕಿ ಇದ್ದಂತಹ ವರ್ಷಗಳ ಸಂಖ್ಯೆ |
|---|---|---|---|
| 1 | 1 | 2018–19 | 01 |
| 2 | 1 | 2014–15 ರಿಂದ 2018–19 | 05 |
| 3 | 1 | 2005–06 ರಿಂದ 2018–19 | 14 |
| 4 | 2 | 2004–05 ರಿಂದ 2018–19 | 15 |
| 5 | 2 | 2003–04 ರಿಂದ 2018–19 | 16 |

## ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದ ಮುಂದೆ ಮಂಡಿಸುವಿಕೆ

**4.12.** ಈ ಕೆಳಗಿನ ಕೋಷ್ಟಕವು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿದ್ದಂತಹ (30 ಸೆಪ್ಟೆಂಬರ್ 2019ರ ವರೆಗೆ) ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದ ಮುಂದೆ ಮಂಡಿಸಿರುವುದರ ಬಗೆಗಿನ ಸ್ಥಿತಿಗತಿಯನ್ನು ತೋರಿಸುತ್ತದೆ.

[88] ಕೆಎಸ್‌ವಿಎಲ್, ಎಂಸಿಎಲ್, ಕೆಟಿಎಲ್ ಮತ್ತು ಎಂಎಸಿಸಿಎಲ್.

[89] ಕೆಎಐಸಿ, ಎಮ್‌ಟಿಸಿ, ಕೆಪಿಎಲ್, ಎಮ್‌ಎಲ್‌ಡಬ್ಲ್ಯೂ, ವಿಎಸ್‌ಎಲ್ ಮತ್ತು ಎಂಸಿಟಿ.

**ಕೋಷ್ಟಕ ಸಂಖ್ಯೆ 4.7: ಶಾಸಕಾಂಗದ ಮುಂದೆ ಮಂಡಿಸಲಾದ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಸ್ಥಿತಿಗತಿ**

| ಕ್ರಮ ಸಂಖ್ಯೆ | ಶಾಸನಬದ್ಧ ನಿಗಮದ ಹೆಸರು | ಶಾಸಕಾಂಗದ ಮುಂದೆ ಯಾವ ಸಾಲಿನವರೆಗೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸಲಾಗಿರುವುದು | ಶಾಸಕಾಂಗದ ಮುಂದೆ ಯಾವ ಸಾಲಿಗೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸಲಾಗಿರುವುದಿಲ್ಲ | |
|---|---|---|---|---|
| | | | ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯು ಸಂಬಂಧಿಸಿರುವ ಸಾಲು | ಸರ್ಕಾರಕ್ಕೆ ನೀಡಲಾದ ದಿನಾಂಕ/ಪ್ರಸಕ್ತ ಸ್ಥಿತಿಗತಿ (ಸೆಪ್ಟಂಬರ್ 2019) |
| 1 | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ | 2017–18 | 2018–19 | ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯ ತಯಾರಿಕೆಯು ಪ್ರಗತಿಯಲ್ಲಿರುವುದು. |
| 2 | ಬೆಂಗಳೂರು ಮಹಾನಗರ ಸಾರಿಗೆ ನಿಗಮ | 2017–18 | 2018–19 | |
| 3 | ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ | 2017–18 | 2018–19 | |
| 4 | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ | 2017–18 | 2018–19 | |
| 5 | ಕರ್ನಾಟಕ ರಾಜ್ಯ ಹಣಕಾಸು ನಿಗಮ | 2017–18 | 2018–19 | |

**ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರದಿರುವುದರಿಂದ ಉಂಟಾಗಿರುವ ಪರಿಣಾಮ**

**4.13.** ಕಂಡಿಕೆಗಳು **4.9** ಮತ್ತು **4.10**ರಲ್ಲಿ ಸ್ಪಷ್ಟಪಡಿಸಿರುವಂತೆ, ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿನ ವಿಳಂಬವು ಸಂಬಂಧಿಸಿದ ನಿಯಮ ನಿಬಂಧನೆಗಳ ಅನುವುಗಳ ಉಲ್ಲಂಘನೆಯಲ್ಲಿ ಪರಿಣಮಿಸುವುದಲ್ಲದೆಯೇ ವಂಚನೆ ಹಾಗೂ ಸಾರ್ವಜನಿಕ ಹಣಕಾಸಿನ ಸೋರಿಕೆಯ ಸಂಭಾವ್ಯ ಅಪಾಯವನ್ನು ತಂದೊಡ್ಡಬಹುದು. ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ ಬಾಕಿಗಳು ಇರುವುದರಿಂದ 2018–19ರ ಸಾಲಿಗೆ ರಾಜ್ಯದ ಒಟ್ಟು ದೇಶೀಯ ಉತ್ಪನ್ನಕ್ಕೆ ಸಾರ್ವಜನಿಕ ವಲಯ ಉದ್ದಿಮೆಗಳ ವಾಸ್ತವಿಕ ಕಾಣಿಕೆಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ ಹಾಗೂ ರಾಜ್ಯದ ಬೊಕ್ಕಸಕ್ಕೆ ಅವುಗಳ ಕಾಣಿಕೆಯ ಬಗ್ಗೆ ರಾಜ್ಯ ಶಾಸಕಾಂಗದ ಮುಂದೆ ವರದಿಗಳನ್ನು ಮಂಡಿಸಿರಲಿಲ್ಲ.

ಆದ್ದರಿಂದ ಈ ಕೆಳಗಿನ ಶಿಫಾರಸು ಮಾಡಲಾಗುತ್ತಿದೆ:

- **ಲೆಕ್ಕಪತ್ರಗಳ ಬಾಕಿಗಳನ್ನು ಚುಕ್ತಗೊಳಿಸುವುದನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಸರ್ಕಾರವು ಒಂದು ಕೋಶವನ್ನು ಸ್ಥಾಪಿಸಬೇಕು ಹಾಗೂ ವೈಯಕ್ತಿಕ ಕಂಪನಿಗಳಿಗೆ ಗುರಿಗಳನ್ನು ನಿಗದಿಗೊಳಿಸಬೇಕು, ತದನಂತರ ಅವುಗಳನ್ನು ಕೋಶವು ಮೇಲ್ವಿಚಾರಣೆ ಮಾಡಬಹುದು.**

- **ಅಸಮರ್ಪಕ ಸಿಬ್ಬಂದಿಗಳು ಅಥವಾ ಅನುಭವದ ಕೊರತೆಯುಳ್ಳ ಸಿಬ್ಬಂದಿಗಳಿರುವೆಡೆ, ಸರ್ಕಾರವು ಲೆಕ್ಕಪತ್ರಗಳ ಬಾಕಿಯನ್ನು ತೀರಿಸಿಕೊಳ್ಳಲು ಅನುವಾಗುವಂತೆ ಇತರೆ ಮಾರ್ಗ/ಕಾರ್ಯತಂತ್ರಗಳನ್ನು ಅನ್ವೇಷಿಸಬಹುದು.**

**ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಅಂತಿಮ ರೂಪಕ್ಕೆ ತರಲ್ಪಟ್ಟಂತಹ ಇತ್ತೀಚಿನ ಲೆಕ್ಕಪತ್ರಗಳ ಅನುಸಾರ ಅವುಗಳ ಕಾರ್ಯನಿರ್ವಹಣೆ**

**4.14.** 30 ಸೆಪ್ಟಂಬರ್ 2019ರಲ್ಲಿದ್ದಂತೆ ಅಂತಿಮ ರೂಪಕ್ಕೆ ತರಲ್ಪಟ್ಟಂತಹ ಇತ್ತೀಚಿನ ಲೆಕ್ಕಪತ್ರಗಳ ಅನುಸಾರ ಸರ್ಕಾರಿ ಕಂಪನಿಗಳು ಹಾಗೂ ಶಾಸನಬದ್ಧ ನಿಗಮಗಳ ಹಣಕಾಸಿನ ಸ್ಥಿತಿಗತಿ ಹಾಗೂ ಕಾರ್ಯನಿರ್ವಹಣೆಯ ಫಲಿತಾಂಶಗಳನ್ನು ***ಅನುಬಂಧ–4(ಬಿ)***ಯಲ್ಲಿ ವಿವರಿಸಲಾಗಿದೆ.

ರಾಜ್ಯದ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು (ವಿದ್ಯುತ್ ವಲಯವನ್ನು ಹೊರತುಪಡಿಸಿ) 2014–15ರಿಂದ 2018–19ರ ಸಾಲುಗಳಲ್ಲಿ ಗಳಿಸಿರುವ (ಭರಿಸಿರುವಂತಹ) ಒಟ್ಟಾರೆ ಲಾಭ (ನಷ್ಟಗಳನ್ನು)[90] ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿದೆ:

**ರೇಖಾಚಿತ್ರ ಸಂಖ್ಯೆ 4.2: ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಲಾಭ/ನಷ್ಟ**

(₹ ಕೋಟಿಯಲ್ಲಿ)




**(ಅಂಕಣದಲ್ಲಿ ತೋರಿಸಿರುವ ಅಂಕಿಸಂಖ್ಯೆಗಳು ಸಂಬಂಧಿತ ಸಾಲುಗಳಲ್ಲಿನ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆಯನ್ನು ತೋರಿಸುತ್ತವೆ)**

ಅವುಗಳ ಇತ್ತೀಚಿನ ಅಂತಿಮರೂಪಕ್ಕೆ ತರಲಾಗಿರುವಂತಹ ಲೆಕ್ಕಪತ್ರಗಳ ಅನುಸಾರ, 103 ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಪೈಕಿ, 90 ಸಾರ್ವಜನಿಕ ವಲಯ ಉದ್ದಿಮೆಗಳು ಕಾರ್ಯನಿರತವಾಗಿರುತ್ತವೆ ಹಾಗೂ 13 ಸಾರ್ವಜನಿಕ ವಲಯ ಉದ್ದಿಮೆಗಳು ಕಾರ್ಯಸ್ಥಗಿತಗೊಂಡಿರುತ್ತವೆ. ಕಾರ್ಯನಿರತ 90 ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 49 ಸಾರ್ವಜನಿಕ ವಲಯ ಉದ್ದಿಮೆಗಳು ₹ 875.09 ಕೋಟಿ ಮೊತ್ತದಷ್ಟು ಲಾಭವನ್ನು ಗಳಿಸಿದ್ದವು ಹಾಗೂ 28 ಸಾರ್ವಜನಿಕ ವಲಯ ಉದ್ದಿಮೆಗಳು ₹ 1,374.11 ಕೋಟಿ ಮೊತ್ತದಷ್ಟು ನಷ್ಟವನ್ನು ಭರಿಸಿದ್ದವು. ಮೂರು ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್ಎಸ್‌ಕೆಡಿಸಿಎಲ್, ಡಿಡಿಯುಟಿಟಿಎಲ್ ಮತ್ತು ಆರ್‌ಐಡಿಸಿಎಲ್) ತಮ್ಮ ಮೊದಲ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತಂದಿರಲಿಲ್ಲ. ಎಂಟು ಸಾರ್ವಜನಿಕ ವಲಯ ಉದ್ದಿಮೆಗಳು[91] ಕೇವಲ ಆದಾಯ ಮತ್ತು ವೆಚ್ಚ ತ:ಖ್ತೆಯನ್ನು ತಯಾರಿಸಿದ್ದವು. ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಸ್ಥಾಪಿಸಲ್ಪಟ್ಟಿದ್ದಂತಹ ಎರಡು (ಕೆಎಮ್‌ಐಸಿಎಲ್ ಮತ್ತು ಕೆಎಜೆಡಿಸಿ) ಸಾರ್ವಜನಿಕ ವಲಯ ಉದ್ದಿಮೆಗಳು, ತಮ್ಮ ಪ್ರಪ್ರಥಮ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತಂದಿರಲಿಲ್ಲ.

ಲಾಭಕ್ಕೆ ಬಹಳಷ್ಟು ಪ್ರಮಾಣದಲ್ಲಿ ಕಾಣಿಕೆಗಳನ್ನು ನೀಡಿದ್ದ ಸಾರ್ವಜನಿಕ ವಲಯ ಉದ್ದಿಮೆಗಳೆಂದರೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (₹ 126.24 ಕೋಟಿ) ಹಾಗೂ ಕರ್ನಾಟಕ

[90] 2017–18 ಮತ್ತು 2018–19ರ ಲಾಭ/ನಷ್ಟಗಳನ್ನು ಇತರೆ ಸಮಗ್ರ ಆದಾಯ (ಓಸಿಐ) ವನ್ನು ಪರಿಗಣಿಸಿ ಲೆಕ್ಕಹಾಕಲಾಗಿದೆ.

[91] ಆರ್‌ಜಿಎಚ್‌ಸಿಎಲ್, ಕೆಎಫ್‌ಸಿಎಸ್‌ಸಿಎಲ್, ಕೆವಿಟಿಎಸ್‌ಡಿಸಿಎಲ್, ಐಕೆಎಫ್, ಬಿಬಿಸಿ, ಟಿಎಮ್‌ಟಿಪಿ, ಎಸ್‌ಜಿಬಿ ಹಾಗೂ ಕೆಎಮ್‌ಇಆರ್‌ಸಿಎಲ್.

ಸೋಪು ಮತ್ತು ಮಾರ್ಜಕ ನಿಯಮಿತ (₹ 109.45 ಕೋಟಿ). ಕರ್ನಾಟಕ ನೀರಾವರಿ ನಿಗಮ ನಿಯಮಿತ (₹ 719.64 ಕೋಟಿ) ಹಾಗೂ ಬೆಂಗಳೂರು ಮಹಾನಗರ ಸಾರಿಗೆ ನಿಗಮ, (₹ 217.61 ಕೋಟಿ) ಇವು ಬೃಹತ್ ಪ್ರಮಾಣದಲ್ಲಿ ನಷ್ಟಗಳನ್ನು ಅನುಭವಿಸಿದ್ದವು.

ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು 2014–15 ಹಾಗೂ 2016–17 ಸಾಲುಗಳಲ್ಲಿ ಅನುಕ್ರಮವಾಗಿ ₹ 166.34 ಕೋಟಿ ಹಾಗೂ ₹ 135.87 ಕೋಟಿ ಮೊತ್ತಗಳಷ್ಟು ನಿವ್ವಳ ಒಟ್ಟಾರೆ ಲಾಭಗಳನ್ನು ತೋರಿಸಿದ್ದವು ಹಾಗೂ 2015–16, 2017–18 ಮತ್ತು 2018–19ರಲ್ಲಿ ಅನುಕ್ರಮವಾಗಿ ₹ 567.58 ಕೋಟಿ, ₹ 494.11 ಕೋಟಿ ಮತ್ತು ₹ 499.02 ಕೋಟಿ ಮೊತ್ತಗಳಷ್ಟು ನಿವ್ವಳ ಒಟ್ಟಾರೆ ನಷ್ಟಗಳನ್ನು ಭರಿಸಿದ್ದವು.

2014–15ರಿಂದ 2018–19 ಸಾಲುಗಳಲ್ಲಿ ಲಾಭವನ್ನು ಗಳಿಸಿದ/ನಷ್ಟವನ್ನು ಭರಿಸಿದ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 4.8: ಲಾಭವನ್ನು ಗಳಿಸಿದ/ನಷ್ಟವನ್ನು ಭರಿಸಿದ ಸಾರ್ವಜನಿಕ ವಲಯ ಉದ್ದಿಮೆಗಳು (ವಿದ್ಯುತ್ ವಲಯವನ್ನು ಹೊರತುಪಡಿಸಿ)**

| ಕ್ರಮ ಸಂಖ್ಯೆ | ವರ್ಷ | ಒಟ್ಟು ಸಾರ್ವಜನಿಕ ವಲಯ ಉದ್ದಿಮೆಗಳು | ಪ್ರಸಕ್ತ ಸಾಲಿನಲ್ಲಿ ಲಾಭವನ್ನು ಗಳಿಸಿದ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಪ್ರಸಕ್ತ ಸಾಲಿನಲ್ಲಿ ನಷ್ಟವನ್ನು ಭರಿಸಿದ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಲಾಭ ಮತ್ತು ನಷ್ಟ ತ:ಖ್ತೆಯನ್ನು ತಯಾರಿಸದಿದ್ದ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ [92] |
|---|---|---|---|---|---|
| 1 | 2014–15 | 69 | 41 | 20 | 8 |
| 2 | 2015–16 | 70 | 43 | 19 | 8 |
| 3 | 2016–17 | 79 | 45 | 19 | 15 |
| 4 | 2017–18 | 83 | 45 | 24 | 14 |
| 5 | 2018–19 | 90 | 49 | 28 | 13 |

### ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಹೂಡಿದ್ದ ಸರ್ಕಾರದ ಹಣಕಾಸಿನ ಮೇಲೆ ಬಂದಂತಹ ಪ್ರತಿಫಲ

**4.15.** ಒಂದು ಕಂಪನಿಯ ಲಾಭದಾಯಕತೆಯನ್ನು ಹೂಡಿಕೆಯ ಮೇಲಿನ ಪ್ರತಿಫಲ, ಈಕ್ವಿಟಿಯ ಮೇಲಿನ ಪ್ರತಿಫಲ ಹಾಗೂ ಹೂಡಿಕೆ ಮಾಡಲಾಗಿರುವ ಬಂಡವಾಳದ ಮೇಲಿನ ಪ್ರತಿಫಲದ ಮೂಲಕ ಸಾಂಪ್ರದಾಯಿಕವಾಗಿ ನಿರ್ಧಾರಣೆ ಮಾಡಲಾಗುವುದು. ಹೂಡಿಕೆಯ ಮೇಲಿನ ಪ್ರತಿಫಲವು ಈಕ್ವಿಟಿಯ ರೂಪದಲ್ಲಿ ಹೂಡಿಕೆ ಮಾಡಲಾಗಿರುವ ಹಣಕಾಸಿನ ಪ್ರಮಾಣ ಹಾಗೂ ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಒಂದು ನಿಗದಿತ ಸಾಲಿನಲ್ಲಿ ಗಳಿಸಲಾದ ಲಾಭ ಅಥವಾ ಭರಿಸಲಾದ ನಷ್ಟವನ್ನು ಅಳೆಯುತ್ತದೆ ಹಾಗೂ ಒಟ್ಟಾರೆ ಹೂಡಿಕೆಗೆ ಹೋಲಿಸಿದಂತೆ ಲಾಭದ ಒಂದು ಶೇಕಡಾವಾರಿನಂತೆ ವ್ಯಕ್ತಪಡಿಸಲಾಗುತ್ತದೆ. ಹೂಡಿಕೆ ಮಾಡಲಾದ ಬಂಡವಾಳದ ಮೇಲಿನ ಪ್ರತಿಫಲವು ಕಂಪನಿಯ ಲಾಭದಾಯಕತೆ ಹಾಗೂ ಬಳಸಲಾದಂತಹ ಅದರ ಬಂಡವಾಳದ ದಕ್ಷತೆಯನ್ನು ಅಳೆಯುವಂತಹ ಒಂದು ಹಣಕಾಸಿನ ಅನುಪಾತವಾಗಿರುತ್ತದೆ ಹಾಗೂ ಬಡ್ಡಿ ಮತ್ತು ತೆರಿಗೆ ಪಾವತಿಗೆ ಮುಂಚಿನ ಕಂಪನಿಯ ಗಳಿಕೆಗಳನ್ನು ಹೂಡಿಕೆ ಮಾಡಲಾದ ಬಂಡವಾಳದಿಂದ ಭಾಗಿಸುವ ಮೂಲಕ ಲೆಕ್ಕಹಾಕಲಾಗುವುದು. ಈಕ್ವಿಟಿಯ ಮೇಲಿನ ಪ್ರತಿಫಲವು ತೆರಿಗೆಯನ್ನು ಪಾವತಿಸಿದನಂತರದ ನಿವ್ವಳ ಲಾಭವನ್ನು

[92] ಯಾವುದೇ ಲಾಭವಿಲ್ಲದ ಅಥವಾ ಯಾವುದೇ ನಷ್ಟವಿಲ್ಲದ ಆಧಾರದ ಮೇರೆಗೆ ಲೆಕ್ಕಪತ್ರಗಳನ್ನು ತಯಾರಿಸುವ ಸಾರ್ವಜನಿಕ ವಲಯ ಉದ್ದಿಮೆಗಳು, ಯೋಜನೆಯು ಪೂರ್ಣಗೊಳ್ಳುವುದು ಬಾಕಿಯಿದ್ದಂತೆ ಲಾಭ ಮತ್ತು ನಷ್ಟ ತ:ಖ್ತೆಯನ್ನು ತಯಾರಿಸದಿರುವ ಸಾರ್ವಜನಿಕ ವಲಯ ಉದ್ದಿಮೆಗಳು ಹಾಗೂ ತಮ್ಮ ಕಾರ್ಯಾಚರಣೆಯ ಪ್ರಥಮ ಸಾಲು ಆಗಿದ್ದು ಅದಕ್ಕೆ ಸಂಬಂಧಿಸಿದಂತೆ ಲೆಕ್ಕಪತ್ರಗಳನ್ನು ತಯಾರಿಸದಿರುವ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಒಳಗೊಂಡಿರುತ್ತದೆ.

ಷೇರುದಾರರುಗಳ ನಿಧಿಯಿಂದ ಭಾಗಿಸುವ ಮೂಲಕ ಲೆಕ್ಕಹಾಕಲಾಗುವ ಕಾರ್ಯದಕ್ಷತೆಯ ಒಂದು ಅಳತೆಯಾಗಿರುತ್ತದೆ. ಈ ಪರಿಮಿತಿಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

ಮಾರ್ಚ್ 2019ರ ಅಂತ್ಯದಲ್ಲಿ ರಾಜ್ಯದಲ್ಲಿ ಇದ್ದಂತಹ 103 ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಪೈಕಿ, ರಾಜ್ಯ ಸರ್ಕಾರವು ಎಂಟು ಉಪ/ಸಹ ಕಂಪನಿಗಳಲ್ಲಿ ಯಾವುದೇ ಹಣಕಾಸನ್ನೂ ಹೂಡಿಕೆ ಮಾಡಿರಲಿಲ್ಲವಾದ್ದರಿಂದ ರಾಜ್ಯ ಸರ್ಕಾರವು ಕೇವಲ 95 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆ ಮಾಡಿತ್ತು.

***ಹೂಡಿಕೆಯ ಮೇಲಿನ ಪ್ರತಿಫಲ***

**4.15.1.** ಸರ್ಕಾರವು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾಗಿರುವ ಹೂಡಿಕೆಯ ಮೇಲೆ ಸಾರ್ವಜನಿಕ ವಲಯ ಉದ್ದಿಮೆಗಳು ಒಂದು ನ್ಯಾಯಸಮ್ಮತ ಪ್ರತಿಫಲವನ್ನು ಉತ್ಪಾದಿಸುವುದನ್ನು ನಿರೀಕ್ಷಿಸಲಾಗುತ್ತದೆ. 31 ಮಾರ್ಚ್ 2019ರಲ್ಲಿದ್ದಂತೆ 95 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಹೂಡಿಕೆಯ ಮೊತ್ತವು, ₹ 57,446.96 ಕೋಟಿ ಮೊತ್ತದಷ್ಟು ಈಕ್ವಿಟಿ ಹಾಗೂ ₹ 2,713.22 ಕೋಟಿ ಮೊತ್ತದಷ್ಟು ದೀರ್ಘಾವಧಿ ಸಾಲಗಳನ್ನು ಒಳಗೊಂಡಂತೆ ಒಟ್ಟಾರೆ ₹ 60,160.18 ಕೋಟಿ ಆಗಿತ್ತು.

ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಿರುವಂತೆ ಹೂಡಿಕೆಯು 2014–15ರಲ್ಲಿದ್ದಂತೆ ₹ 40,539.29 ಕೋಟಿಯಿಂದ 2018–19ರಲ್ಲಿ ₹ 60,160.18 ಕೋಟಿಗೆ ಅಂದರೆ ಶೇಕಡಾ 48.40ರಷ್ಟು ವೃದ್ಧಿಯಾಗಿತ್ತು.

**ರೇಖಾಚಿತ್ರ ಸಂಖ್ಯೆ 4.3: ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸರ್ಕಾರವು ಮಾಡಿದ್ದ ಹೂಡಿಕೆ**

**(₹ ಕೋಟಿಯಲ್ಲಿ)**




***ಹೂಡಿಕೆಯ ಮೂಲ ಮೌಲ್ಯದ ಆಧಾರದ ಮೇಲಿನ ಪ್ರತಿಫಲ***

**4.15.2.** ಸಾರ್ವಜನಿಕ ವಲಯ ಉದ್ದಿಮೆಗಳಿಗೆ ನೀಡಲಾಗಿರುವ ಬಡ್ಡಿ ರಹಿತ ಸಾಲಗಳನ್ನು ಮರುಪಾವತಿಸದಿರುವುದರಿಂದ ಹಾಗೂ ಅವುಗಳನ್ನು ಈಕ್ವಿಟಿಗೆ, ಸಮಾನಗೊಳಿಸಿರುವುದರಿಂದ ಹಾಗೂ ಸಾಲಗಳನ್ನು ಮಂಜೂರು ಮಾಡಿದ ನಂತರ ಸಾಲಗಳ ಭಾಗಗಳನ್ನು ಈಕ್ವಿಟಿಗೆ ಪರಿವರ್ತಿಸಿರುವುದರಿಂದ ದೀರ್ಘಾವಧಿ ಸಾಲಗಳ ಪೈಕಿ, ಕೇವಲ ಬಡ್ಡಿ ರಹಿತ ಸಾಲಗಳನ್ನು ಮಾತ್ರ ಈ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಹೂಡಿಕೆ ಎಂಬುದಾಗಿ ಪರಿಗಣಿಸಲಾಗಿರುವುದು. ಮುಂದುವರೆದು, ಅನುದಾನಗಳು/ಸಹಾಯಾನುಧನಗಳ ರೂಪದಲ್ಲಿ ಲಭ್ಯವಾಗುವಂತೆ ಮಾಡಲಾಗಿರುವ ಹಣಕಾಸು ಹೂಡಿಕೆ ಎಂಬುದಾಗಿ ಪರಿಗಣಿಸಲು ಅರ್ಹತೆಯನ್ನು ಹೊಂದಿರುವುದಿಲ್ಲವಾದ್ದರಿಂದ ಅದನ್ನು ಒಂದು ಹೂಡಿಕೆಯನ್ನಾಗಿ ಪರಿಗಣಿಸಿರುವುದಿಲ್ಲ.

103 ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಪೈಕಿ 95ರಲ್ಲಿ ರಾಜ್ಯ ಸರ್ಕಾರದ ಹೂಡಿಕೆಯನ್ನು ಪ್ರತಿ ಸಾಲಿನಲ್ಲಿ ಈಕ್ವಿಟಿಯ ರೂಪದಲ್ಲಿ ರಾಜ್ಯ ಸರ್ಕಾರದ ಹೂಡಿಕೆಯನ್ನು

ಪರಿಗಣಿಸುವ ಬಡ್ಡಿ ರಹಿತ ಸಾಲಗಳನ್ನು ಸೇರಿಸುವ ಮೂಲಕ ಹಾಗೂ ತದನಂತರ ಈಕ್ವಿಟಿಯನ್ನಾಗಿ ಪರಿವರ್ತಿಸಲಾದಂತಹ ಬಡ್ಡಿರಹಿತ ಸಾಲವನ್ನು ಯಾವುದಾದರೂ ಇದ್ದಲ್ಲಿ, ಅದನ್ನು ಕಳೆದನಂತರ ಲೆಕ್ಕಹಾಕಲಾಗಿರುವುದು.

31 ಮಾರ್ಚ್ 2019ರಲ್ಲಿದ್ದಂತೆ, ಈ 95 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ (ವಿದ್ಯುತ್ ವಲಯವನ್ನು ಹೊರತುಪಡಿಸಿ) ರಾಜ್ಯ ಸರ್ಕಾರದ ಹೂಡಿಕೆಯು ₹ 57,446.96 ಕೋಟಿ ಮೊತ್ತದಷ್ಟು ಈಕ್ವಿಟಿ ಹಾಗೂ ₹ 2,713.22 ಕೋಟಿ ಮೊತ್ತದಷ್ಟು ದೀರ್ಘಾವಧಿ ಸಾಲವನ್ನು ಒಳಗೊಂಡಂತೆ ₹ 60,160.18 ಕೋಟಿ ಆಗಿತ್ತು. ಬಿಡುಗಡೆ ಮಾಡಲಾಗಿದ್ದ ದೀರ್ಘಾವಧಿ ಸಾಲಗಳ ಪೈಕಿ ₹ 47.37 ಕೋಟಿ ಮೊತ್ತವು ಬಡ್ಡಿ ರಹಿತ ಸಾಲವಾಗಿತ್ತು. ಈ ರೀತಿಯಾಗಿ, ₹ 57,446.96 ಕೋಟಿ ಮೊತ್ತದಷ್ಟು ಈಕ್ವಿಟಿ ಹಾಗೂ ₹ 47.37 ಕೋಟಿ ಮೊತ್ತದಷ್ಟು ಬಡ್ಡಿ ರಹಿತ ಸಾಲವನ್ನು ಈ 95 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯ ಸರ್ಕಾರದ ಹೂಡಿಕೆ ಎಂಬುದಾಗಿ ಪರಿಗಣಿಸಿದಂತೆ, 2018–19ರ ಅಂತ್ಯದಲ್ಲಿ ಮೂಲ ಮೌಲ್ಯದ ಆಧಾರದ ಮೇರೆಗೆ ಹೂಡಿಕೆಯು ₹ 57,494.33 ಕೋಟಿ ಆಗಿತ್ತು.

2014–15ರಿಂದ 2018–19ರ ಅವಧಿಗೆ ಮೂಲ ಮೌಲ್ಯದ ಆಧಾರದ ಮೇರೆಗೆ ಹೂಡಿಕೆಯ ಮೇಲಿನ ವಲಯವಾರು ಪ್ರತಿಫಲವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 4.9: ಮೂಲ ಮೌಲ್ಯದ ಆಧಾರದ ಮೇರೆಗೆ ರಾಜ್ಯ ಸರ್ಕಾರದ ಹೂಡಿಕೆಯ ಮೇಲಿನ ಪ್ರತಿಫಲ**

| ಕ್ರಮ ಸಂಖ್ಯೆ | ವರ್ಷವಾರು ವಲಯವಾರು ವಿಭಜನೆ | ಒಟ್ಟಾರೆ ಗಳಿಕೆಗಳು/ ನಷ್ಟಗಳು (–) (₹ ಕೋಟಿಯಲ್ಲಿ) | ವರ್ಷದ ಅಂತ್ಯದಲ್ಲಿದ್ದಂತೆ ಈಕ್ವಿಟಿ ಮತ್ತು ಬಡ್ಡಿ ರಹಿತ ಸಾಲಗಳು (₹ ಕೋಟಿಯಲ್ಲಿ) | ಹೂಡಿಕೆಯ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|---|
| **2014–15** | | | | |
| 1 | ಸಾಮಾಜಿಕ ವಲಯ | 61.25 | 756.34 | 8.10 |
| 2 | ಸ್ಪರ್ಧಾತ್ಮಕ ಪರಿಸರದಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳು | 9.90 | 2,505.49 | 0.40 |
| 3 | ಇತರವುಗಳು | –84.14 | 36,008.78 | (0.23) |
| 4 | **ಒಟ್ಟು** | **–12.99** | **39,270.61** | **(0.03)** |
| **2015–16** | | | | |
| 1 | ಸಾಮಾಜಿಕ ವಲಯ | 119.27 | 850.24 | 14.03 |
| 2 | ಸ್ಪರ್ಧಾತ್ಮಕ ಪರಿಸರದಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳು | –42.45 | 2,554.28 | (1.66) |
| 3 | ಇತರವುಗಳು | –826.64 | 39,133.65 | (2.11) |
| 4 | **ಒಟ್ಟು** | **–749.82** | **42,538.17** | **(1.76)** |
| **2016–17** | | | | |
| 1 | ಸಾಮಾಜಿಕ ವಲಯ | 131.85 | 974.12 | 13.54 |
| 2 | ಸ್ಪರ್ಧಾತ್ಮಕ ಪರಿಸರದಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳು | 146.15 | 2,316.06 | 6.31 |
| 3 | ಇತರವುಗಳು | –327.73 | 43,468.79 | (0.75) |
| 4 | **ಒಟ್ಟು** | **–49.73** | **46,758.97** | **(0.11)** |
| **2017–18** | | | | |
| 1 | ಸಾಮಾಜಿಕ ವಲಯ | 144.61 | 1,146.32 | 12.62 |
| 2 | ಸ್ಪರ್ಧಾತ್ಮಕ ಪರಿಸರದಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳು | –372.61 | 2,241.06 | (16.63) |
| 3 | ಇತರವುಗಳು | –454.04 | 47,471.96 | (0.96) |
| 4 | **ಒಟ್ಟು** | **–682.04** | **50,859.34** | **(1.34)** |

| ಕ್ರಮ ಸಂಖ್ಯೆ | ವರ್ಷವಾರು ವಲಯವಾರು ವಿಭಜನೆ | ಒಟ್ಟಾರೆ ಗಳಿಕೆಗಳು/ ನಷ್ಟಗಳು (–) (₹ ಕೋಟಿಯಲ್ಲಿ) | ವರ್ಷದ ಅಂತ್ಯದಲ್ಲಿದ್ದಂತೆ ಈಕ್ವಿಟಿ ಮತ್ತು ಬಡ್ಡಿ ರಹಿತ ಸಾಲಗಳು (₹ ಕೋಟಿಯಲ್ಲಿ) | ಹೂಡಿಕೆಯ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|---|
| **2018–19** | | | | |
| 1 | ಸಾಮಾಜಿಕ ವಲಯ | 142.13 | 1,226.33 | 11.59 |
| 2 | ಸ್ಪರ್ಧಾತ್ಮಕ ಪರಿಸರದಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳು | –283.95 | 2,108.73 | (13.47) |
| 3 | ಇತರವುಗಳು | –542.18 | 54,159.27 | (1.00) |
| 4 | **ಒಟ್ಟು** | **–684.00** | **57,494.33** | **(1.19)** |

ರಾಜ್ಯ ಸರ್ಕಾರವು ಮಾಡಿರುವ ಹೂಡಿಕೆಗಳ ಮೇಲಿನ ಪ್ರತಿಫಲವನ್ನು ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟಾರೆ ಗಳಿಕೆಗಳನ್ನು ಈಕ್ವಿಟಿ ಮತ್ತು ಬಡ್ಡಿ ರಹಿತ ಸಾಲದ ರೂಪದಲ್ಲಿ ರಾಜ್ಯ ಸರ್ಕಾರದ ಹೂಡಿಕೆಯಿಂದ ಭಾಗಿಸುವುದರೊಂದಿಗೆ ಲೆಕ್ಕಹಾಕಲಾಗಿದೆ. 2014–15ರಲ್ಲಿ ಶೇಕಡಾ (–) 0.03ರಷ್ಟಿದ್ದಂತಹ ಸಾರ್ವಜನಿಕ ವಲಯ ಉದ್ದಿಮೆಗಳ ಹೂಡಿಕೆಗಳ ಮೇಲಿನ ಪ್ರತಿಫಲವು ಸ್ಪರ್ಧಾತ್ಮಕ ಪರಿಸರ ಹಾಗೂ ಇತರೆ ವಲಯಗಳೊಂದಿಗಿನ ಸ್ಪರ್ಧಾತ್ಮಕತೆಯ ಪ್ರಮುಖ ಕಾರಣದಿಂದ 2018–19ರಲ್ಲಿ ಶೇಕಡಾ (–) 1.19ರಷ್ಟು ನಕಾರಾತ್ಮಕ ಪ್ರತಿಫಲಕ್ಕೆ ಇಳಿಮುಖಗೊಂಡಿತು. 2014–15ರಿಂದ 2018–19ರ ಅವಧಿಯಲ್ಲಿ ಹೂಡಿಕೆಯ ಮೇಲಿನ ಒಟ್ಟಾರೆ ಪ್ರತಿಫಲವು ನಕಾರಾತ್ಮಕವಾಗಿತ್ತು, ಇದಕ್ಕೆ ಕರ್ನಾಟಕ ನೀರಾವರಿ ನಿಗಮ ನಿಯಮಿತವು[93] (ಇತರೆ ವಲಯ) ಭರಿಸಿದ ಗಮನಾರ್ಹ ನಷ್ಟಗಳು ಹಾಗೂ ಮೂರು ರಸ್ತೆ ಸಾರಿಗೆ ನಿಗಮಗಳು[94] (ಸ್ಪರ್ಧಾತ್ಮಕ ಪರಿಸರದಲ್ಲಿನ ಸಾರ್ವಜನಿಕ ವಲಯ ಉದ್ದಿಮೆಗಳು) ಭರಿಸಿದ್ದ ನಷ್ಟಗಳು ಕಾರಣವಾಗಿದ್ದವು. ರಾಜ್ಯ ಸರ್ಕಾರವು ಆಯವ್ಯಯ ಬೆಂಬಲದ ಮೂಲಕ ಬಂಡವಾಳ ಮತ್ತು ಆಡಳಿತಾತ್ಮಕ ವೆಚ್ಚಗಳ ಕಡೆಗೆ ಹಣಕಾಸನ್ನು ಒದಗಿಸುತಿದ್ದಿತಾದರೂ, ಕರ್ನಾಟಕ ನೀರಾವರಿ ನಿಗಮ ನಿಯಮಿತವು ತಾನು ಗಳಿಸಿದ ವರಮಾನವು ತನ್ನ ಕಾರ್ಯಾಚರಣೆಗಳ ವೆಚ್ಚಗಳನ್ನು ಭರಿಸಲು ಸಮರ್ಪಕವಾಗಿರಲಿಲ್ಲವಾದ್ದರಿಂದ ನಿರಂತರ ನಷ್ಟಗಳನ್ನು ಭರಿಸಿತು.

***ಹೂಡಿಕೆಯ ಪ್ರಸ್ತುತ ಮೌಲ್ಯದ ಆಧಾರದ ಮೇರೆಗೆ ಪ್ರತಿಫಲ***

**4.15.3.** ಸಾರ್ವಜನಿಕ ವಲಯ ಉದ್ದಿಮೆಗಳ ಲಾಭದಾಯಕತೆಯನ್ನು ನಿರ್ಧಾರಣೆ ಮಾಡುವ ಸಲುವಾಗಿ, ರಾಜ್ಯ ಸರ್ಕಾರವು ಹಣಕಾಸನ್ನು ಹೂಡಿಕೆ ಮಾಡಿದ್ದಂತಹ ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಂಬಂಧಿಸಿದಂತೆ ಗಳಿಕೆಗಳು ಹಾಗೂ ಅವುಗಳಿಗೆ ಪರಸ್ಪರ ಅಭಿಮುಖವಾಗಿ ಮಾಡಲಾಗಿದ್ದಂತಹ ಹೂಡಿಕೆಗಳ ಒಂದು ವಿಶ್ಲೇಷಣೆಯನ್ನು ಮಾಡಲಾಯಿತು. ಕೇವಲ ಹೂಡಿಕೆಯ ಮೂಲ ಮೌಲ್ಯದ ಆಧಾರದ ಮೇರೆಗೆ ಮಾತ್ರ ಪ್ರತಿಫಲದ ಸಾಂಪ್ರದಾಯಿಕ ಲೆಕ್ಕಾಚಾರವು ಹಣದ ಪ್ರಸಕ್ತ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವಾದ್ದರಿಂದ ಹೂಡಿಕೆಯ ಮೇಲಿನ ಪ್ರತಿಫಲದ ಸಮರ್ಪಕತೆಯ ಒಂದು ಯಥಾರ್ಥತೆಯಿಂದ ಕೂಡಿದ ಸೂಚಕವಾಗಿರುವುದಿಲ್ಲ. ಹೂಡಿಕೆಯ ಮೂಲ ಮೌಲ್ಯಕ್ಕೆ ಹೋಲಿಸಿದಂತೆ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಕರ್ನಾಟಕ ಸರ್ಕಾರದ ಹೂಡಿಕೆಗಳ ಪ್ರಸಕ್ತ ಮೌಲ್ಯದ ಮೇಲಿನ ಪ್ರತಿಫಲದ ದರವನ್ನು ನಿರ್ಧಾರಣೆ ಮಾಡುವ ಸಲುವಾಗಿ ಸರ್ಕಾರಿ ಹೂಡಿಕೆಯ ಪ್ರಸಕ್ತ ಮೌಲ್ಯವನ್ನು ಲೆಕ್ಕಹಾಕಲಾಯಿತು.

31 ಮಾರ್ಚ್ 2019ರವರೆಗೆ ಪ್ರತೀ ಸಾಲಿನ ಅಂತ್ಯದಲ್ಲಿದ್ದಂತೆ ಮೂಲ ಮೌಲ್ಯವನ್ನು ಅದರ ಪ್ರಸಕ್ತ ಮೌಲ್ಯಕ್ಕೆ ತರುವ ಸಲುವಾಗಿ, ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಕರ್ನಾಟಕ ಸರ್ಕಾರವು ಹೂಡಿಕೆ ಮಾಡಿದ್ದಂತಹ ಹಿಂದಿನ ಹೂಡಿಕೆಗಳು/ವರ್ಷವಾರು ಹಣಕಾಸನ್ನು ಸಂಬಂಧಿತ ಸಾಲಿಗೆ ಸರ್ಕಾರದ ಸಾಲಗಳ ಮೇಲೆ ವರ್ಷವಾರು ಸರಾಸರಿ ಬಡ್ಡಿ ದರದಲ್ಲಿ

[93] 2014–15ರಲ್ಲಿ ₹ 295.59 ಕೋಟಿ ನಷ್ಟ, 2015–16ರಲ್ಲಿ ₹ 970.77 ಕೋಟಿ ನಷ್ಟ, 2016–17ರಲ್ಲಿ ₹ 476.88 ಕೋಟಿ ನಷ್ಟ, 2017–18ರಲ್ಲಿ ₹ 575.92 ಕೋಟಿ ನಷ್ಟ ಹಾಗು 2018–19ರಲ್ಲಿ ₹ 719.64 ಕೋಟಿ ನಷ್ಟ.

[94] ಬಿಎಮ್‌ಟಿಸಿ (₹ 217.61 ಕೋಟಿ), ಎನ್‌ಡಬ್ಲ್ಯೂಕೆಆರ್‌ಟಿಸಿ (₹ 71.98 ಕೋಟಿ) ಹಾಗು ಎನ್‌ಇಕೆಆರ್‌ಟಿಸಿ (₹ 33.31 ಕೋಟಿ) ನಷ್ಟವನ್ನು ಭರಿಸಿದ್ದವು.

ಸಂಯೋಜಿಸಲಾಯಿತು.ಈ ಬಡ್ಡಿದರ ಆಯಾ ಸಾಲುಗಳಲ್ಲಿ ಹಣಕಾಸಿಗೆ ಸರ್ಕಾರಕ್ಕೆ ಆಗಬಹುದಾದ ಕನಿಷ್ಠ ವೆಚ್ಚವಾಗಿ ಪರಿಗಣಿಸಲಾಗಿದೆ. ಆದ್ದರಿಂದ, 2010–11ರಿಂದ 2018–19ರಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಹೂಡಿಕೆಯ ಪ್ರಸಕ್ತ ಮೌಲ್ಯವನ್ನು ಲೆಕ್ಕಹಾಕಲಾಯಿತು.

ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ) ರಾಜ್ಯ ಸರ್ಕಾರದ ಪ್ರಸಕ್ತ ಮೌಲ್ಯವನ್ನು ಈ ಕೆಳಗಿನ ಕಲ್ಪನೆಗಳೊಂದಿಗೆ ಲೆಕ್ಕಹಾಕಲಾಯಿತು.

- ಸಾರ್ವಜನಿಕ ವಲಯ ಉದ್ದಿಮೆಗಳು ಬಡ್ಡಿರಹಿತ ಸಾಲಗಳ ಯಾವುದೇ ಮೊತ್ತವನ್ನು ಮರುಪಾವತಿಸಿರಲಿಲ್ಲವಾದ್ದರಿಂದ ಬಡ್ಡಿರಹಿತ ಸಾಲಗಳನ್ನು ರಾಜ್ಯ ಸರ್ಕಾರವು ಮಾಡಿರುವ ಹೂಡಿಕೆ ಎಂಬುದಾಗಿ ಪರಿಗಣಿಸಲಾಯಿತು. ಮುಂದುವರೆದು, ತದನಂತರದಲ್ಲಿ ಈಕ್ವಿಟಿಯನ್ನಾಗಿ ಪರಿವರ್ತಿಸಲಾಗಿರುವಂತಹ ಬಡ್ಡಿರಹಿತ ಸಾಲಗಳು, ಯಾವುದಾದರೂ ಇದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಈಕ್ವಿಟಿಯನ್ನಾಗಿ ಪರಿವರ್ತಿಸಲಾದಂತಹ ಸಾಲದ ಮೊತ್ತವನ್ನು ಬಡ್ಡಿರಹಿತ ಸಾಲಗಳ ಮೊತ್ತದಿಂದ ಕಳೆಯಲಾಯಿತು ಹಾಗೂ ಪ್ರಸಕ್ತ ಸಾಲಿನ ಈಕ್ವಿಟಿಗೆ ಸೇರಿಸಲಾಯಿತು. ಅನುದಾನಗಳು/ಸಹಾಯಾನುಧಾನಗಳ ರೂಪದಲ್ಲಿ ನೀಡಿದ ಹಣಕಾಸನ್ನು ಹೂಡಿಕೆ ಎಂಬುದಾಗಿ ಪರಿಗಣಿಸುವ ಅರ್ಹತೆಯನ್ನು ಅವು ಹೊಂದಿರುವುದಿಲ್ಲವಾದ್ದರಿಂದ ಹೂಡಿಕೆ ಎಂಬುದಾಗಿ ಗಣನೆಗೆ ತೆಗೆದುಕೊಳ್ಳಲಿಲ್ಲ.

- ಪ್ರಸಕ್ತ ಮೌಲ್ಯವನ್ನು ಲೆಕ್ಕಹಾಕುವ ಸಲುವಾಗಿ ಸಂಯೋಜಿತ ದರವು ಪ್ರಸಕ್ತ ಸಾಲಿಗೆ ಹಣಕಾಸಿನ ಹೂಡಿಕೆಯ ಕಡೆಗೆ ಸರ್ಕಾರವು ಭರಿಸಿದ ವೆಚ್ಚಗಳನ್ನು ಅದು ಪ್ರತಿನಿಧಿಸುವುದರಿಂದ, ಸಂಬಂಧಿತ ಹಣಕಾಸು ಸಾಲಿಗೆ ಸರ್ಕಾರದ ಸಾಲಗಳ ಮೇಲೆ ಬಡ್ಡಿಯ ಸರಾಸರಿ ದರವನ್ನು ಅಳವಡಿಸಿಕೊಳ್ಳಲಾಯಿತು ಮತ್ತು ಆದ್ದರಿಂದ ಸರ್ಕಾರವು ಮಾಡಿರುವ ಹೂಡಿಕೆಗಳ ಮೇಲೆ ಕನಿಷ್ಠ ನಿರೀಕ್ಷಿತ ದರ ಎಂಬುದಾಗಿ ಪರಿಗಣಿಸಲಾಯಿತು.

**4.15.4**. 2009–10ರವರೆಗೆ ಹಾಗೂ 2010–11ರಿಂದ 2018–19ರ ಅವಧಿಯಲ್ಲಿ ಈಕ್ವಿಟಿ ಮತ್ತು ಬಡ್ಡಿರಹಿತ ಸಾಲಗಳ ರೂಪದಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ) ರಾಜ್ಯ ಸರ್ಕಾರದ ಹೂಡಿಕೆಯ ಕಂಪನಿವಾರು ಸ್ಥಿತಿಗತಿಯನ್ನು ***ಅನುಬಂಧ-5(ಬಿ)***ಯಲ್ಲಿ ನೀಡಲಾಗಿದೆ. ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ವಿದ್ಯುತ್ ವಲಯವನ್ನು ಹೊರತುಪಡಿಸಿ) ರಾಜ್ಯ ಸರ್ಕಾರದ ಹಣಕಾಸಿನ ಪ್ರಸಕ್ತ ಮೌಲ್ಯದ ಕ್ರೋಡೀಕೃತ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 4.10: 2010–11ರಿಂದ 2018–19ರ ಅವಧಿಯಲ್ಲಿ ರಾಜ್ಯ ಸರ್ಕಾರವು ಹೂಡಿಕೆ ಮಾಡಿದ ಹಣಕಾಸು ಹಾಗೂ ಅವುಗಳ ಪ್ರಸಕ್ತ ಮೌಲ್ಯದ ವರ್ಷವಾರು ವಿವರಗಳು.**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರ್ಷ | ವರ್ಷದ ಪ್ರಾರಂಭದಲ್ಲಿ ಹೂಡಿಕೆಯ ಪ್ರಸಕ್ತ ಮೌಲ್ಯ | ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ಹೂಡಿಕೆ ಮಾಡಿದ ಈಕ್ವಿಟಿ | ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ನೀಡಿದ ಬಡ್ಡಿ ರಹಿತ ಸಾಲಗಳು | ವರ್ಷದ ಅಂತ್ಯದಲ್ಲಿ ಒಟ್ಟಾರೆ ಹೂಡಿಕೆ | ಸರ್ಕಾರಿ ಸಾಲಗಳ [95] ಮೇಲಿನ ಸರಾಸರಿ ಬಡ್ಡಿ (ಶೇಕಡಾವಾರು) | ವರ್ಷದ ಅಂತ್ಯದಲ್ಲಿ ಒಟ್ಟಾರೆ ಹೂಡಿಕೆಯ ಪ್ರಸಕ್ತ ಮೌಲ್ಯ | ಪ್ರಸಕ್ತ ಸಾಲಿನ ಹಣಕಾಸಿನ ವೆಚ್ಚವನ್ನು ವಸೂಲಾತಿ ಮಾಡುವ ಸಲುವಾಗಿ ನಿರೀಕ್ಷಿತ ಕನಿಷ್ಠ ಪ್ರತಿಫಲ | ಪ್ರಸಕ್ತ ಸಾಲಿಗೆ ಒಟ್ಟಾರೆ ಗಳಿಕೆಗಳು[96] |
|---|---|---|---|---|---|---|---|---|---|
| **(ಎ)** | **(ಬಿ)** | **(ಸಿ)** | **(ಡಿ)** | **(ಇ)** | **(ಎಫ್=(ಸಿ+ಡಿ+ಇ))** | **(ಜಿ)** | **(ಹೆಚ್=ಎಫ್×(1+ಜಿ)/100)** | **(ಐ=ಎಫ್x(ಜಿ/100)** | **(ಜೆ)** |
| 1 | 2009–10 ರವರೆಗೆ | – | 23,506.04 | 17.97 | 23,524.01 | 6.70 | 25,100.12 | 1,576.11 | |
| 2 | 2010–11 | 23,647.51[97] | 3,430.55 | 15.00 | 27,093.06 | 6.40 | 28,827.01 | 1,733.96 | 395.26 |
| 3 | 2011–12 | 28,827.01 | 3,411.54 | 10.25 | 32,248.80 | 6.60 | 34,377.23 | 2,128.42 | 149.33 |
| 4 | 2012–13 | 34,377.23 | 3,604.19 | 0.50 | 37,981.92 | 6.60 | 40,488.72 | 2,506.81 | 159.98 |
| 5 | 2013–14 | 40,488.72 | 3,250.82 | – | 43,739.54 | 6.20 | 46,451.39 | 2,711.85 | 364.96 |
| 6 | 2014–15 | 46,449.84[98] | 3,382.63 | 3.65 | 49,836.12 | 6.50 | 53,075.47 | 3,239.35 | –12.99 |
| 7 | 2015–16 | 53,075.47 | 3,267.56 | – | 56,343.03 | 6.50 | 60,005.33 | 3,662.30 | –749.82 |
| 8 | 2016–17 | 60,005.33 | 4,220.80 | – | 64,226.13 | 6.30 | 68,272.37 | 4,046.25 | –49.73 |
| 9 | 2017–18 | 68,272.37 | 4,100.37 | – | 72,372.74 | 7.70 | 77,945.44 | 5,572.70 | –682.04 |
| 10 | 2018–19 | 77,945.44 | 6,634.99 | – | 84,580.43 | 8.20 | 91,516.03 | 6,935.60 | –684.00 |
| | **ಒಟ್ಟು** | | **57,446.96[99]** | **47.37** | | | | | |

ರಾಜ್ಯ ಸರ್ಕಾರವು 2010–11ರಿಂದ 2018–19ರ ಅವಧಿಯಲ್ಲಿ ಈಕ್ವಿಟಿ (₹ 33,940.92 ಕೋಟಿ) ಹಾಗೂ ಬಡ್ಡಿರಹಿತ ಸಾಲಗಳ (₹ 29.40 ಕೋಟಿ) ರೂಪದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸನ್ನು ಹೂಡಿಕೆ ಮಾಡಿದ್ದರಿಂದ, ರಾಜ್ಯ ಸರ್ಕಾರವು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಹೂಡಿಕೆ ಮಾಡಿದ್ದ ಹಣಕಾಸು 31 ಮಾರ್ಚ್ 2010ರಲ್ಲಿದ್ದಂತಹ ₹ 23,524.01 ಕೋಟಿಯಿಂದ 2018–19ರಲ್ಲಿ ₹ 57,494.33 ಕೋಟಿಗೆ ಹೆಚ್ಚಳಗೊಂಡಿತು. ರಾಜ್ಯ ಸರ್ಕಾರವು ಹೂಡಿಕೆ ಮಾಡಿದ್ದ ಹಣಕಾಸಿನ ಪ್ರಸಕ್ತ ಮೌಲ್ಯವು 31 ಮಾರ್ಚ್ 2019ರಲ್ಲಿದ್ದಂತೆ ₹ 91,516.03 ಕೋಟಿ ಆಗಿತ್ತು.

2010–11ರಿಂದ 2018–19ರಲ್ಲಿ, ಪ್ರಸಕ್ತ ಸಾಲಿನ ಒಟ್ಟಾರೆ ಗಳಿಕೆಗಳು, ಈ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆ ಮಾಡಲಾಗಿದ್ದ ಹಣಕಾಸಿನ ವೆಚ್ಚಗಳನ್ನು ವಸೂಲಾತಿ ಮಾಡುವ ಸಲುವಾಗಿ ಅಪೇಕ್ಷಿತ ಕನಿಷ್ಠ ಮೊತ್ತಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿತ್ತು. 2014–15ರಿಂದ 2018–19ರವರೆಗೆ ನಷ್ಟಗಳಿಗೆ

---

95 ರಾಜ್ಯ ಸರ್ಕಾರದ ಸಾಲಗಳ ಮೇಲಿನ ಸರಾಸರಿ ಬಡ್ಡಿ ದರವನ್ನು ಕರ್ನಾಟಕ ಸರ್ಕಾರಕ್ಕೆ ಸಂಬಂಧಿಸಿದಂತೆ ರಾಜ್ಯ ಹಣಕಾಸಿನ ಸ್ಥಿತಿಗತಿಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಗಳ ಅನುಸಾರ ಅಳವಡಿಸಿಕೊಳ್ಳಲಾಗಿದೆ.

96 ಪ್ರಸಕ್ತ ಸಾಲಿನ ಒಟ್ಟಾರೆ ಗಳಿಕೆಯು, ರಾಜ್ಯ ಸರ್ಕಾರವು ಹಣಕಾಸನ್ನು ಹೂಡಿಕೆ ಮಾಡಿರುವ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಂಬಂಧಿತ ವರ್ಷಗಳಿಗೆ ಅವುಗಳ ಇತ್ತೀಚಿನ ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ನಿವ್ವಳ ಗಳಿಕೆಗಳ ಒಟ್ಟಾರೆ ಅಂಕಿಸಂಖ್ಯೆಯನ್ನು ತೋರಿಸುತ್ತದೆ.

97 ಲೆಕ್ಕಪರಿಶೋಧನಾ ವ್ಯಾಪ್ತಿಯನ್ನು ಮತ್ತೊಂದು ಕಚೇರಿಗೆ ವರ್ಗಾಯಿಸಿದ ಕಾರಣ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ (ಬಿಎಂಆರ್‌ಸಿಎಲ್ – ₹ 1,451.16 ಕೋಟಿ) ಪ್ರಸಕ್ತ ಮೌಲ್ಯವನ್ನು ತೆಗೆದುಹಾಕಲಾಗಿದೆ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತವು (ಕೆಎಸ್‌ಐಎಂಸಿ–₹ 1.45 ಕೋಟಿ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದೊಂದಿಗೆ ಸೇರ್ಪಡೆಗೊಂಡಿರುವುದರಿಂದ ಅದರ ಪ್ರಸಕ್ತ ಮೌಲ್ಯವನ್ನು ತೆಗೆದು ಹಾಕಲಾಗಿದೆ.

98 ಚಾಮುಂಡಿ ಮೆಷಿನ್ ಟೂಲ್ಸ್ ಲಿಮಿಟೆಡ್ (ಸಿಎಂಟಿಎಲ್–₹ 0.86 ಕೋಟಿ) ಹಾಗೂ ಕರ್ನಾಟಕ ರಾಜ್ಯ ಜವಳಿ ನಿಯಮಿತ (ಕೆಎಸ್‌ಟಿಎಲ್ – ₹ 0.69 ಕೋಟಿ) ಇವು ಸಮಾಪನಗೊಂಡಿರುವುದರಿಂದ ಪ್ರಸಕ್ತ ಮೌಲ್ಯವನ್ನು ತೆಗೆದುಹಾಕಲಾಗಿದೆ.

99 ಇದು ಬಿಎಂಆರ್‌ಸಿಎಲ್ (₹ 1,360.04 ಕೋಟಿ), ಕೆಎಸ್‌ಐಎಂಸಿ (₹ 1.36 ಕೋಟಿ), ಸಿಎಂಟಿಎಲ್ (₹ 0.63 ಕೋಟಿ) ಹಾಗೂ ಕೆಎಸ್‌ಟಿಎಲ್ (₹ 0.50 ಕೋಟಿ), ಈ ಸಾರ್ವಜನಿಕ ವಲಯ ಉದ್ದಿಮೆಗಳು ವರ್ಗಾವಣೆಗೊಂಡಿರುವುದರಿಂದ/ಸೇರ್ಪಡೆಗೊಂಡಿರುವುದರಿಂದ/ಸಮಾಪನಗೊಂಡಿರುವುದರಿಂದ ಒಳಗೊಂಡಿರುವುದಿಲ್ಲ.

ಪ್ರಮುಖ ಕೊಡುಗೆದಾರ ಕರ್ನಾಟಕ ನೀರಾವರಿ ನಿಗಮ ನಿಯಮಿತವಾಗಿತ್ತು ಎಂಬುದನ್ನು ಗಮನಿಸಲಾಯಿತು.

**4.15.5.** ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯ ಸರ್ಕಾರವು ಹೂಡಿಕೆ ಮಾಡಿರುವ ಹಣಕಾಸಿನ (ಪ್ರಸಕ್ತ ಮೌಲ್ಯದಲ್ಲಿ) ಮೇಲಿನ ಪ್ರತಿಫಲವು ಈ ಸಾರ್ವಜನಿಕ ವಲಯ ಉದ್ದಿಮೆಗಳ ಲಾಭದಾಯಕತೆ ಮತ್ತು ದಕ್ಷತೆಯನ್ನು ಸೂಚಿಸುತ್ತದೆ. ರಾಜ್ಯ ಸರ್ಕಾರದ ಹೂಡಿಕೆಯ ಮೇಲಿನ ಪ್ರತಿಫಲವನ್ನು ಈ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟಾರೆ ಗಳಿಕೆಗಳನ್ನು[100] ರಾಜ್ಯ ಸರ್ಕಾರದ ಹೂಡಿಕೆಗಳ ಪ್ರಸಕ್ತ ಮೌಲ್ಯದಿಂದ ಭಾಗಿಸುವ ಮೂಲಕ ಲೆಕ್ಕಹಾಕಲಾಯಿತು. 2014–15ರಿಂದ 2018–19ರ ಅವಧಿಯಲ್ಲಿ ಈ ಸಾರ್ವಜನಿಕ ವಲಯ ಉದ್ದಿಮೆಗಳು ನಕಾರಾತ್ಮಕ ಹೂಡಿಕೆಯ ಮೇಲಿನ ಪ್ರತಿಫಲವನ್ನು ಹೊಂದಿದ್ದರಿಂದ ಪ್ರತಿಫಲವನ್ನು ಲೆಕ್ಕಹಾಕಲಿಲ್ಲ.

### *ನಿವ್ವಳ ಆಸ್ತಿಯ ಮೌಲ್ಯದ (ನೆಟ್ ವರ್ತ್) ಸವೆತ*

**4.15.6** ನಿವ್ವಳ ಆಸ್ತಿಯ ಮೌಲ್ಯವು ಒಂದು ಸಂಸ್ಥೆಯ ಮಾಲೀಕರಿಗೆ ತಮ್ಮ ಸಂಸ್ಥೆಯ ಮೌಲ್ಯವನ್ನು ತಿಳಿಸುವ ಒಂದು ಮಾನದಂಡವಾಗಿರುತ್ತದೆ. ಒಂದು ನಕಾರಾತ್ಮಕ (–) ನಿವ್ವಳ ಆಸ್ತಿಯ ಮೌಲ್ಯವು ಮಾಲೀಕರ ಸಂಪೂರ್ಣ ಹೂಡಿಕೆಯು ಕ್ರೋಡೀಕೃತ ನಷ್ಟಗಳಿಂದ ಸವೆದು ಹೋಗಿರುತ್ತದೆ ಎಂಬುದನ್ನು ಸೂಚಿಸುತ್ತದೆ. ಕರ್ನಾಟಕ ಸರ್ಕಾರವು 2014–15ರಿಂದ 2018–19ರ ಅವಧಿಯಲ್ಲಿ ಹಣಕಾಸನ್ನು ಹೂಡಿಕೆ ಮಾಡಿದ್ದ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ನಿವ್ವಳ ಆಸ್ತಿಯ ಮೌಲ್ಯವನ್ನು (ನೆಟ್ ವರ್ತ್)[101] ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ:

**ಕೋಷ್ಟಕ ಸಂಖ್ಯೆ 4.11: 2014–15ರಿಂದ 2018–19ರ ಅವಧಿಯಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ನಿವ್ವಳ ಆಸ್ತಿಯ ಮೌಲ್ಯ**

***(₹ ಕೋಟಿಯಲ್ಲಿ)***

| ಕ್ರಮ ಸಂಖ್ಯೆ | ಸಾಲು | ವರ್ಷದ ಅಂತ್ಯದಲ್ಲಿ ಪಾವತಿಸಲ್ಪಟ್ಟಿರುವ ಬಂಡವಾಳ | ವರ್ಷದ ಅಂತ್ಯದಲ್ಲಿ ಸಂಚಿತ ಲಾಭ (+)/ನಷ್ಟ (–) | ನಿವ್ವಳ ಆಸ್ತಿಯ ಮೌಲ್ಯ |
|---|---|---|---|---|
| 1 | 2014–15 | 25,618.71 | –997.76 | 24,620.95 |
| 2 | 2015–16 | 29,960.26 | –1,179.37 | 28,780.89 |
| 3 | 2016–17 | 31,768.92 | –1,291.12 | 30,477.80 |
| 4 | 2017–18 | 39,191.50 | –3,102.81 | 36,088.69 |
| 5 | 2018–19 | 51,789.92 | –2,754.87 | 49,035.05 |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಒಟ್ಟಾರೆ ನಿವ್ವಳ ಆಸ್ತಿಯ ಮೌಲ್ಯವು 2018–19ಕ್ಕೆ ಅಂತ್ಯಗೊಂಡಂತಹ ಕಳೆದ ಐದು ಸಾಲುಗಳಲ್ಲಿ ಸಕಾರಾತ್ಮಕವಾಗಿತ್ತು. ಆದಾಗ್ಯೂ, 95 ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 26ರ[102] ನಿವ್ವಳ ಆಸ್ತಿಯ ಮೌಲ್ಯವು 31 ಮಾರ್ಚ್ 2019ರಲ್ಲಿದ್ದಂತೆ ಅಳಿಸಿಹೋಗಿತ್ತು.

---

[100] ಇದು ರಾಜ್ಯ ಸರ್ಕಾರವು ಹಣಕಾಸನ್ನು ಹೂಡಿಕೆ ಮಾಡಿರುವ ಸಾರ್ವಜನಿಕ ವಲಯ ಉದ್ದಿಮೆಗಳ ಸಂಬಂಧಿತ ಸಾಲಿಗೆ ಲಾಭ/ನಷ್ಟಗಳನ್ನು ಒಳಗೊಂಡಿರುತ್ತದೆ.

[101] ಪಾವತಿಸಲ್ಪಟ್ಟಿರುವ ಬಂಡವಾಳಕ್ಕೆ ಮುಕ್ತ ಮೀಸಲಿರಿಸಿರುವಿಕೆಗಳನ್ನು ಕೂಡುವುದು - ಇವುಗಳ ಮೊತ್ತದಿಂದ ಸಂಚಿತ ನಷ್ಟವನ್ನು ಕಳೆಯುವುದರಿಂದ ಬರುವ ನಿವ್ವಳ ಮೊತ್ತ.

[102] ಎನ್‌ಎಸಿಡಿಸಿಎಲ್ (₹ 0.23 ಕೋಟಿ), ಕೆಯುಡಿಸಿಎಲ್ (₹ 0.19 ಕೋಟಿ), ಕೆಎಸ್‌ಎಸಿಪಿಎಲ್ (₹ 25.14 ಕೋಟಿ), ಕೆಎಸ್‌ಪಿಎಎಮ್‌ಎಲ್ (₹ 9.81 ಕೋಟಿ), ಕೆಹೆಚ್‌ಡಿಸಿಎಲ್ (₹ 79.62 ಕೋಟಿ), ಅರ್‌ಜಿಎಚ್‌ಸಿಎಲ್ (₹ 20.91 ಕೋಟಿ), ಲಿಡ್ಕರ್ (₹ 16.41 ಕೋಟಿ), ಕೆಎಸ್‌ಸಿಡಿಸಿಎಲ್ (₹ 3.26 ಕೋಟಿ), ಎಂಪಿಎಂ (₹ 307.05 ಕೋಟಿ), ಕೆಎಸ್‌ಎಂಬಿ (₹ 16.67 ಕೋಟಿ), ಮೈಶುಗರ್ (₹ 407.94 ಕೋಟಿ), ಕೆಎಸ್‌ಟಿಡಿಸಿ (₹ 10.18 ಕೋಟಿ), ಟಿಎಮ್‌ಟಿಪಿ (₹ 2.61 ಕೋಟಿ), ಹೆಚ್‌ಡಿಎಸ್‌ಸಿಎಲ್ (₹ 0.72 ಕೋಟಿ), ಎಸ್‌ಎಸ್‌ಸಿಎಲ್ (₹ 0.03 ಕೋಟಿ), ಎಸ್‌ಜಿಬಿ (₹ 0.01 ಕೋಟಿ), ಬೆಮಸಾಸಂ (₹ 57.61 ಕೋಟಿ), ವಾಕರಸಾನಿನಿ (₹ 650.17 ಕೋಟಿ), ಈಕರಸಾನಿನಿ (₹ 443.27 ಕೋಟಿ), ಕೆಎಐಸಿ (₹ 315.49 ಕೋಟಿ), ಎಂಟಿಸಿ (₹ 4.45 ಕೋಟಿ), ಕೆಪಿಎಲ್ (₹ 5.86 ಕೋಟಿ), ಎಮ್‌ಎಮ್‌ಸಿಎಲ್ (₹ 0.08 ಕೋಟಿ), ಎಂಎಲ್‌ಡಬ್ಲ್ಯೂ (₹ 318.45 ಕೋಟಿ), ಎಂಸಿಎಲ್ (₹ 2.96 ಕೋಟಿ) ಹಾಗೂ ಎನ್‌ಜಿಇಎಫ್ (₹ 362.34 ಕೋಟಿ).

### *ಷೇರು ಲಾಭಾಂಶ (ಡಿವಿಡೆಂಡ್) ಪಾವತಿ*

**4.15.7.** ರಾಜ್ಯ ಸರ್ಕಾರವು ಮಾರ್ಗಸೂಚಿಗಳನ್ನು ರೂಪಿಸಿತು (ಮೇ 2003), ಅಂತಹ ಮಾರ್ಗಸೂಚಿಗಳ ಅನುಸಾರ, ರಾಜ್ಯ ಸರ್ಕಾರವು ಈಕ್ವಿಟಿಯನ್ನು ಹೊಂದಿರುವಂತಹ ಸಾರ್ವಜನಿಕ ಉದ್ದಿಮೆಗಳು ಅಥವಾ ಜಂಟಿ ಸಾಹಸೋದ್ಯಮಗಳ ನಿರ್ದೇಶಕರುಗಳ ಮಂಡಳಿಯಲ್ಲಿ ಇರುವಂತಹ ಸರ್ಕಾರಿ ನಾಮನಿರ್ದೇಶಿತರುಗಳು ಷೇರು ಹಿಡುವಳಿಗಳ ಮೇಲೆ ಕನಿಷ್ಠ ಶೇಕಡಾ 20ರಷ್ಟು ಷೇರು ಲಾಭಾಂಶವನ್ನು ಘೋಷಿಸುವಂತೆ ಒತ್ತಾಯಿಸತಕ್ಕದ್ದು. ಇಷ್ಟರಮಟ್ಟಿಗೆ ಷೇರು ಲಾಭಾಂಶವನ್ನು ಪಾವತಿಸಲು ಸಾಧ್ಯವಾಗುವುದಿಲ್ಲವಾದಲ್ಲಿ, ಷೇರು ಲಾಭಾಂಶ ಪಾವತಿಯು ಕನಿಷ್ಠ ಪಕ್ಷ ತೆರಿಗೆ ಪಾವತಿಯ ನಂತರ ಸಿಗುವ ಲಾಭದ ಮೊತ್ತದ ಶೇಕಡಾ 20ರಷ್ಟು ಆಗಿರತಕ್ಕದ್ದು. ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಂಬಂಧಿಸಿದಂತೆ 2014–15ರಿಂದ 2018–19ರ ಅವಧಿಯಲ್ಲಿ ಷೇರು ಲಾಭಾಂಶ ಪಾವತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 4.12: 2014–15ರಿಂದ 2018–19ರ ಅವಧಿಯಲ್ಲಿ ಷೇರು ಲಾಭಾಂಶ ಪಾವತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಕರ್ನಾಟಕ ಸರ್ಕಾರವು ಈಕ್ವಿಟಿಯನ್ನು ಹೂಡಿಕೆ ಮಾಡಿದ ಒಟ್ಟಾರೆ ಸಾರ್ವಜನಿಕ ವಲಯ ಉದ್ದಿಮೆಗಳು | | ಪ್ರಸಕ್ತ ಸಾಲಿನಲ್ಲಿ ಲಾಭವನ್ನು ಗಳಿಸಿದ ಸಾರ್ವಜನಿಕ ವಲಯ ಉದ್ದಿಮೆಗಳು | | ಪ್ರಸಕ್ತ ಸಾಲಿನಲ್ಲಿ ಷೇರು ಲಾಭಾಂಶವನ್ನು ಘೋಷಿಸಿದ/ಪಾವತಿಸಿದ ಸಾರ್ವಜನಿಕ ವಲಯ ಉದ್ದಿಮೆಗಳು | | ಪಾವತಿಸಲ್ಪಟ್ಟಿರುವ ಬಂಡವಾಳದ ಒಂದು ಶೇಕಡಾವಾರಿನಂತೆ ಷೇರು ಲಾಭಾಂಶದ ಪಾವತಿ |
|---|---|---|---|---|---|---|---|---|
| | | ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಪಾವತಿಸಲ್ಪಟ್ಟಿರುವ ಬಂಡವಾಳ | ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ [103] | ಪಾವತಿಸಲ್ಪಟ್ಟಿರುವ ಬಂಡವಾಳ | ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಸಾರ್ವಜನಿಕ ವಲಯ ಉದ್ದಿಮೆಗಳು ಘೋಷಿಸಿದ/ ಪಾವತಿಸಿದ ಷೇರು ಲಾಭಾಂಶ | |
| | **(1)** | **(2)** | **(3)** | **(4)** | **(5)** | **(6)** | **(7)** | **(8=7/5*100)** |
| 1 | 2014–15 | 74 | 24,635.61 | 47 | 3,028.11 | 16 | 23.52 | 0.78 |
| 2 | 2015–16 | 75 | 29,306.50 | 44 | 2,019.65 | 17 | 28.70 | 1.42 |
| 3 | 2016–17 | 84 | 31,362.49 | 45 | 2,560.47 | 13 | 12.18 | 0.48 |
| 4 | 2017–18 | 89 | 38,128.91 | 46 | 3,407.45 | 14 | 19.44 | 0.57 |
| 5 | 2018–19 | 95 | 51,015.65 | 47 | 11,304.20 | 10 | 34.89 | 0.31 |

2014–15ರಿಂದ 2018–19ರ ಅವಧಿಯಲ್ಲಿ ಲಾಭವನ್ನು ಗಳಿಸಿದ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆಯು 44 ಹಾಗೂ 47ರ ನಡುವೆ ಇತ್ತು, ಅವುಗಳ ಪೈಕಿ ಕೇವಲ 10ರಿಂದ 17 ಸಾರ್ವಜನಿಕ ವಲಯ ಉದ್ದಿಮೆಗಳು ಷೇರು ಲಾಭಾಂಶವನ್ನು ಘೋಷಿಸಿದ್ದವು. ಮುಂದುವರೆದು, 2014–15ರಿಂದ 2018–19ರ ಅವಧಿಯಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಪಾವತಿಸಲ್ಪಟ್ಟಿರುವ ಬಂಡವಾಳದ ಒಂದು ಶೇಕಡಾವಾರಿನಂತೆ ಷೇರು ಲಾಭಾಂಶ ಪಾವತಿಯು ಕೇವಲ ನಾಮಮಾತ್ರವಾಗಿತ್ತು ಹಾಗೂ ಅದು ಶೇಕಡಾ 0.31 ಹಾಗೂ ಶೇಕಡಾ 1.42ರ ನಡುವೆ ಇತ್ತು.

ಮುಂದುವರೆದು, 2014–15ರಲ್ಲಿ ಒಂದು ಸಾರ್ವಜನಿಕ ವಲಯ ಉದ್ದಿಮೆ (ಕೆಎಸ್‌ಪಿಎಚ್‌ಐಡಿಸಿಎಲ್), 2015–16ರಲ್ಲಿ ಒಂದು ಸಾರ್ವಜನಿಕ ವಲಯ ಉದ್ದಿಮೆ (ಕೆಎಸ್‌ಎಂಸಿಎಲ್), 2016–17ರಲ್ಲಿ ಒಂದು ಸಾರ್ವಜನಿಕ ವಲಯ ಉದ್ದಿಮೆ (ಕೆಎಸ್‌ಪಿಎಚ್‌ಐಡಿಸಿಎಲ್) ಹಾಗೂ 2017–18ರಲ್ಲಿ ಎರಡು ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್‌ಪಿಎಚ್‌ಐಡಿಸಿಎಲ್ ಮತ್ತು ಎಚ್‌ಜಿಎಂಎಲ್) ಮತ್ತು 2018–19ರಲ್ಲಿ ನಾಲ್ಕು ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್‌ಡಿಎಲ್, ಕೆಎಸ್‌ಎಮ್‌ಸಿಎಲ್, ಎಮ್‌ಪಿವಿಎಲ್ ಮತ್ತು ಕೆಎಸ್‌ಪಿಹೆಚ್‌ಐಡಿಸಿಎಲ್) ಸೂಚಿಸಲಾಗಿದ್ದ ಕನಿಷ್ಠ ಶೇಕಡಾ 20ಕ್ಕಿಂತ ಹೆಚ್ಚಿನ

[103] ಇದು ರಾಜ್ಯ ಸರ್ಕಾರವು ನೇರವಾಗಿ ಹೂಡಿಕೆ ಮಾಡಿರದ ಉಪ/ಸಹ ಕಂಪನಿಗಳನ್ನು ಒಳಗೊಂಡಿರುವುದಿಲ್ಲ ಹಾಗೂ ಕಾರ್ಯಸ್ಥಗಿತ ಕಂಪನಿಗಳನ್ನು ಒಳಗೊಂಡಿರುತ್ತದೆ.

ಷೇರು ಲಾಭಾಂಶವನ್ನು ಘೋಷಿಸಿದ್ದವು/ಪಾವತಿಸಿದ್ದವು.

**ಈಕ್ವಿಟಿಯ ಮೇಲಿನ ಪ್ರತಿಫಲ**

**4.15.8.** ಈಕ್ವಿಟಿಯ ಮೇಲಿನ ಪ್ರತಿಫಲವು ವ್ಯವಸ್ಥಾಪನೆಯು ಲಾಭವನ್ನು ಗಳಿಸುವ ಸಲುವಾಗಿ ಕಂಪನಿಯ ಆಸ್ತಿಗಳನ್ನು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ ಎಂಬುದನ್ನು ನಿರ್ಧಾರಣೆ ಮಾಡುವ ಸಲುವಾಗಿ ಹಣಕಾಸಿನ ಕಾರ್ಯನಿರ್ವಹಣೆಯ ಒಂದು ಅಳತೆಯಾಗಿರುತ್ತದೆ ಹಾಗೂ ತೆರಿಗೆಗಳನ್ನು ಪಾವತಿಸಿದನಂತರದ ನಿವ್ವಳ ಲಾಭವನ್ನು ಷೇರುದಾರರುಗಳ ಹಣಕಾಸಿನಿಂದ[104] ಭಾಗಿಸುವ ಮೂಲಕ ಲೆಕ್ಕಹಾಕಲಾಗುವುದು.

ರಾಜ್ಯ ಸರ್ಕಾರವು ಹಣಕಾಸನ್ನು ಹೂಡಿಕೆ ಮಾಡಿರುವ ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಂಬಂಧಿಸಿದಂತೆ ಈಕ್ವಿಟಿಯ ಮೇಲಿನ ಪ್ರತಿಫಲವನ್ನು ಲೆಕ್ಕಹಾಕಲಾಯಿತು. ಈ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ 2014–15ರಿಂದ 2018–19ರ ಅವಧಿಯಲ್ಲಿ ಷೇರುದಾರರ ಹಣಕಾಸು ಹಾಗೂ ಈಕ್ವಿಟಿಯ ಮೇಲಿನ ಪ್ರತಿಫಲದ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 4.13: ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಂಬಂಧಿಸಿದಂತೆ ಈಕ್ವಿಟಿಯ ಮೇಲಿನ ಪ್ರತಿಫಲ**

| ಕ್ರಮ ಸಂಖ್ಯೆ | ವರ್ಷ | ತೆರಿಗೆಗಳ ಪಾವತಿ ನಂತರ ನಿವ್ವಳ ಲಾಭ (₹ ಕೋಟಿಯಲ್ಲಿ) | ಷೇರುದಾರರ ಹಣಕಾಸು (₹ ಕೋಟಿಯಲ್ಲಿ) | ಈಕ್ವಿಟಿಯ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|---|
| 1 | 2014–15 | (–) 12.99 | 24,620.95 | – |
| 2 | 2015–16 | (–) 749.82 | 28,780.89 | – |
| 3 | 2016–17 | (–) 49.73 | 30,477.80 | – |
| 4 | 2017–18 | (–) 682.04 | 36,088.69 | – |
| 5 | 2018–19 | (–) 684.00 | 49,035.05 | – |

ಮೇಲಿನ ಕೋಷ್ಟಕದಿಂದ ಕಂಡು ಬರುವಂತೆ, ಸಾರ್ವಜನಿಕ ವಲಯ ಉದ್ದಿಮೆಗಳು (ವಿದ್ಯುತ್ ವಲಯವನ್ನು ಹೊರತುಪಡಿಸಿ) 2014–15ರಿಂದ 2018–19ರ ಅವಧಿಯಲ್ಲಿ ನಷ್ಟವನ್ನು ಭರಿಸಿದ್ದರಿಂದ ಈಕ್ವಿಟಿಯ ಮೇಲಿನ ಪ್ರತಿಫಲವು ನಕಾರಾತ್ಮಕವಾಗಿತ್ತು.

***ಹೂಡಿಕೆ ಮಾಡಲಾದ ಬಂಡವಾಳದ ಮೇಲಿನ ಪ್ರತಿಫಲ***

**4.15.9.** ಹೂಡಿಕೆ ಮಾಡಲಾದ ಬಂಡವಾಳದ ಮೇಲಿನ ಪ್ರತಿಫಲವು ಕಂಪನಿಯ ಲಾಭದಾಯಕತೆ ಹಾಗೂ ಬಂಡವಾಳವನ್ನು ತೊಡಗಿಸುವಲ್ಲಿನ ದಕ್ಷತೆಯನ್ನು ಅಳೆಯುವ ಒಂದು ಅನುಪಾತವಾಗಿರುತ್ತದೆ. ಬಡ್ಡಿ ಹಾಗೂ ತೆರಿಗೆಗಳ ಪಾವತಿಗೆ ಮುಂಚಿನ ಒಂದು ಕಂಪನಿಯ ಗಳಿಕೆಗಳನ್ನು ತೊಡಗಿಸಲಾಗಿರುವ ಬಂಡವಾಳದಿಂದ[105] ಭಾಗಿಸುವ ಮೂಲಕ ಹೂಡಿಕೆ ಮಾಡಲಾದ ಬಂಡವಾಳದ ಮೇಲಿನ ಪ್ರತಿಫಲವನ್ನು ಲೆಕ್ಕಹಾಕಲಾಗುವುದು. 2014–15ರಿಂದ 2018–19ರ ಅವಧಿಯಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಹೂಡಿಕೆ ಮಾಡಲಾಗಿರುವ ಬಂಡವಾಳದ ಮೇಲಿನ ಪ್ರತಿಫಲದ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

---

104 ಷೇರುದಾರರುಗಳ ಹಣಕಾಸು = ಪಾವತಿಸಲ್ಪಟ್ಟಿರುವ ಬಂಡವಾಳಕ್ಕೆ ಮುಕ್ತ ಮೀಸಲಿರಿಸಿರುವಿಕೆಗಳನ್ನು ಸೇರಿಸಿ ಅದರಿಂದ ಸಂಚಿತ ನಷ್ಟವನ್ನು ಕಳೆಯುವುದರ ಮೂಲಕ ಲೆಕ್ಕಹಾಕಲಾದ ಮೊತ್ತ.

105 ಹೂಡಿಕೆ ಮಾಡಲಾದ ಬಂಡವಾಳ = ಪಾವತಿಸಲ್ಪಟ್ಟ ಬಂಡವಾಳಕ್ಕೆ ಮುಕ್ತ ಮೀಸಲಿರಿಸುವಿಕೆ ಮತ್ತು ದೀರ್ಘಾವಧಿ ಸಾಲಗಳನ್ನು ಸೇರಿಸಿ ಅದರಿಂದ ಸಂಚಿತ ನಷ್ಟವನ್ನು ಕಳೆಯುವುದರ ಮೂಲಕ ಲೆಕ್ಕ ಹಾಕಲಾದ ಮೊತ್ತ.

**ಕೋಷ್ಟಕ ಸಂಖ್ಯೆ 4.14: ಹೂಡಿಕೆ ಮಾಡಲಾಗಿರುವ ಬಂಡವಾಳದ ಮೇಲಿನ ಪ್ರತಿಫಲ**

| ಕ್ರಮ ಸಂಖ್ಯೆ | ವರ್ಷ | ಬಡ್ಡಿ ಹಾಗೂ ತೆರಿಗೆಗಳ ಪಾವತಿಗೆ ಮುಂಚಿನ ಗಳಿಕೆಗಳು (₹ ಕೋಟಿಯಲ್ಲಿ) | ಹೂಡಿಕೆ ಮಾಡಲಾಗಿರುವ ಬಂಡವಾಳ (₹ ಕೋಟಿಯಲ್ಲಿ) | ಹೂಡಿಕೆ ಮಾಡಲಾಗಿರುವ ಬಂಡವಾಳದ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|---|
| 1 | 2014–15 | 717.56 | 35,433.69 | 2.03 |
| 2 | 2015–16 | 202.37 | 47,061.69 | 0.43 |
| 3 | 2016–17 | 1,095.97 | 48,347.07 | 2.27 |
| 4 | 2017–18 | 983.00 | 57,151.05 | 1.72 |
| 5 | 2018–19 | 1005.95 | 73,958.27 | 1.36 |

ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಹೂಡಿಕೆ ಮಾಡಲಾಗಿರುವ ಪ್ರತಿಫಲವು 2014–15ರಲ್ಲಿದ್ದ ಶೇಕಡಾ 2.03ರಿಂದ 2018–19ರಲ್ಲಿ ಶೇಕಡಾ 1.36ಕ್ಕೆ ಗಣನೀಯವಾಗಿ ಇಳಿಮುಖಗೊಂಡಿತ್ತು, ಇದು ಲಾಭದಾಯಕತೆಯು ಪ್ರೋತ್ಸಾಹದಾಯಕವಾಗಿರಲಿಲ್ಲ ಎಂಬುದನ್ನು ಸೂಚಿಸುತ್ತಿತ್ತು. ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಲಾಭದಾಯಕತೆಯು ಕಡಿಮೆಯಾದ್ದರಿಂದ 2015–16ರಲ್ಲಿ ಹೂಡಿಕೆ ಮಾಡಲಾದ ಬಂಡವಾಳದ ಮೇಲಿನ ಪ್ರತಿಫಲವು ತೀರಾ ಕಡಿಮೆಯಾದ ಶೇಕಡಾ 0.43ರಷ್ಟಿತ್ತು.

## ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ದೀರ್ಘಾವಧಿ ಸಾಲಗಳ ವಿಶ್ಲೇಷಣೆ

**4.16** ಸರ್ಕಾರ, ಬ್ಯಾಂಕುಗಳು ಮತ್ತು ಇತರೆ ಹಣಕಾಸು ಸಂಸ್ಥೆಗಳಿಗೆ ಕಂಪನಿಗಳು ಪಾವತಿಸಬೇಕಾದ ಬಡ್ಡಿಯನ್ನು ಪಾವತಿಸುವಲ್ಲಿನ ಕ್ಷಮತೆಯನ್ನು ಮೌಲ್ಯಮಾಪನ ಮಾಡಲು 2014–15ರಿಂದ 2018–19ರ ಅವಧಿಯಲ್ಲಿ ಕಂಪನಿಗಳ ದೀರ್ಘಾವಧಿ ಸಾಲಗಳ ವಿಶ್ಲೇಷಣೆಯನ್ನು ನಡೆಸಲಾಯಿತು. ಇದನ್ನು ಬಡ್ಡಿ ವ್ಯಾಪ್ತಿ ಅನುಪಾತ ಹಾಗೂ ಋಣ/ಸಾಲ ವಹಿವಾಟು ಅನುಪಾತದ ಮೂಲಕ ನಿರ್ಧಾರಣೆ ಮಾಡಲಾಯಿತು.

### *ಬಡ್ಡಿ ವ್ಯಾಪ್ತಿ ಅನುಪಾತ*

**4.16.1.** ಬಡ್ಡಿ ವ್ಯಾಪ್ತಿ ಅನುಪಾತವನ್ನು ಬಾಕಿಯಿರುವ ಸಾಲದ ಮೇಲೆ ಬಡ್ಡಿಯನ್ನು ಪಾವತಿಸುವಲ್ಲಿ ಕಂಪನಿಗೆ ಇರುವ ಸಾಮರ್ಥ್ಯವನ್ನು ನಿರ್ಧಾರಣೆ ಮಾಡುವ ಸಲುವಾಗಿ ಬಳಸಲಾಗುವುದು ಹಾಗೂ ಬಡ್ಡಿ ಮತ್ತು ತೆರಿಗೆಗಳ ಪಾವತಿಗೆ ಮುಂಚಿನ ಕಂಪನಿಯ ಗಳಿಕೆಗಳನ್ನು ಅದೇ ಅವಧಿಯ ಬಡ್ಡಿ ವೆಚ್ಚಗಳಿಂದ ಭಾಗಿಸುವ ಮೂಲಕ ಲೆಕ್ಕಹಾಕಲಾಗುವುದು. ಅನುಪಾತವು ಕಡಿಮೆ ಪ್ರಮಾಣದಲ್ಲಿದ್ದಲ್ಲಿ, ಸಾಲಗಳ ಮೇಲಿನ ಬಡಿಯನ್ನು ಪಾವತಿಸುವಲ್ಲಿ ಕಂಪನಿಯ ಸಾಮರ್ಥ್ಯವು ಕಡಿಮೆ ಪ್ರಮಾಣದಲ್ಲಿರುತ್ತದೆ. ಒಂದಕ್ಕಿಂತ ಕಡಿಮೆ ಪ್ರಮಾಣದಲ್ಲಿನ ಬಡ್ಡಿ ಪಾವತಿ ಅನುಪಾತವು ಕಂಪನಿಯು ಬಡ್ಡಿ ಪಾವತಿಯ ಮೇಲೆ ತನ್ನ ವೆಚ್ಚಗಳನ್ನು ಭರಿಸಲು ಸಮರ್ಪಕ ವರಮಾನವನ್ನು ಉತ್ಪಾದಿಸುತ್ತಿರುವುದಿಲ್ಲ ಎಂಬುದನ್ನು ಸೂಚಿಸುತ್ತದೆ. 2014–15ರಿಂದ 2018–19ರ ಅವಧಿಯಲ್ಲಿ ಬಡ್ಡಿ ಪಾವತಿ ಹೊರೆಯನ್ನು ಹೊಂದಿದ್ದಂತಹ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಬಡ್ಡಿ ವ್ಯಾಪ್ತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 4.15: ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಬಡ್ಡಿ ವ್ಯಾಪ್ತಿ ಅನುಪಾತ**

| ಕ್ರಮ ಸಂಖ್ಯೆ | ವರ್ಷ | ಬಡ್ಡಿ (₹ ಕೋಟಿಯಲ್ಲಿ) | ಬಡ್ಡಿ ಮತ್ತು ತೆರಿಗೆಗಳ ಪಾವತಿಗೆ ಮುಂಚಿನ ಕಂಪನಿಯ ಗಳಿಕೆ (₹ ಕೋಟಿಯಲ್ಲಿ) | ಬಡ್ಡಿ ಪಾವತಿ ಹೊರೆಯನ್ನು ಹೊಂದಿರುವ ಕಂಪನಿಗಳ ಸಂಖ್ಯೆ | ಒಂದಕ್ಕಿಂತ ಹೆಚ್ಚಿನ ಬಡ್ಡಿ ವ್ಯಾಪ್ತಿ ಅನುಪಾತವನ್ನು ಹೊಂದಿರುವ ಕಂಪನಿಗಳ ಸಂಖ್ಯೆ | ಒಂದಕ್ಕಿಂತ ಕಡಿಮೆ ಬಡ್ಡಿ ವ್ಯಾಪ್ತಿ ಅನುಪಾತವನ್ನು ಹೊಂದಿರುವ ಕಂಪನಿಗಳ ಸಂಖ್ಯೆ |
|---|---|---|---|---|---|---|
| 1 | 2014–15 | 643.38 | 717.56 | 43 | 25 | 18 |
| 2 | 2015–16 | 849.18 | 202.37 | 39 | 22 | 17 |
| 3 | 2016–17 | 798.02 | 1,095.97 | 30 | 18 | 12 |
| 4 | 2017–18 | 1,246.98 | 983.00 | 40 | 23 | 17 |
| 5 | 2018–19 | 1,398.81 | 1,005.95 | 46 | 4 | 42 |

ಒಂದಕ್ಕಿಂತ ಹೆಚ್ಚಿನ ಬಡ್ಡಿ ವ್ಯಾಪ್ತಿ ಅನುಪಾತದೊಂದಿಗಿನ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಶೇಕಡಾವಾರು ಸಂಖ್ಯೆಯು 2014–15ರಿಂದ 2018–19ರಲ್ಲಿ ಶೇಕಡಾ 9 ಮತ್ತು ಶೇಕಡಾ 60ರ ನಡುವೆ ಇತ್ತು ಎಂಬುದನ್ನು ಗಮನಿಸಬಹುದು. 31 ಮಾರ್ಚ್ 2019ರಲ್ಲಿದ್ದಂತೆ, 46 ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 42 ಕಂಪನಿಗಳು ಒಂದಕ್ಕಿಂತ ಕಡಿಮೆ ಬಡ್ಡಿ ಅನುಪಾತವನ್ನು ಹೊಂದಿದ್ದವು, ಇದು ಈ ಸಾರ್ವಜನಿಕ ವಲಯ ಉದ್ದಿಮೆಗಳು ಬಡ್ಡಿ ಪಾವತಿಯ ಮೇಲೆ ತಮ್ಮ ವೆಚ್ಚಗಳನ್ನು ಭರಿಸುವ ಸಲುವಾಗಿ ಸಮರ್ಪಕ ವರಮಾನವನ್ನು ಉತ್ಪಾದಿಸಲಾಗಲಿಲ್ಲ ಎಂಬುದನ್ನು ಸೂಚಿಸುತ್ತಿತ್ತು.

***ಸಾಲ/ಋಣ ವಹಿವಾಟು ಅನುಪಾತ***

**4.16.2.** ಸಾಲ/ಋಣ ವಹಿವಾಟು ಅನುಪಾತವನ್ನು ಬಾಕಿಯಿರುವಂತಹ ಸಾಲಗಳನ್ನು ವರ್ಷದ ಅಂತ್ಯದಲ್ಲಿನ ವಹಿವಾಟಿನಿಂದ ಭಾಗಿಸುವುದರ ಮೂಲಕ ಲೆಕ್ಕಹಾಕಲಾಗಿದೆ. ಕಳೆದ ಐದು ವರ್ಷಗಳಲ್ಲಿ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ[106] (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಾಲ/ಋಣ ವಹಿವಾಟು ಅನುಪಾತವನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 4.16: ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಾಲ/ಋಣ ವಹಿವಾಟು ಅನುಪಾತ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|---|
| 1 | ಸಾಲ/ಋಣ | 9,966.48 | 10,991.17 | 17,437.64 | 20,629.38 | 24,285.46 |
| 2 | ವಹಿವಾಟು | 13,854.17 | 15,399.44 | 15,173.41 | 17,489.40 | 19,877.30 |
| 3 | ಸಾಲ/ಋಣ ವಹಿವಾಟು ಅನುಪಾತ | 0.72:1 | 0.71:1 | 1.15:1 | 1.18:1 | 1.22:1 |

2014–15ರಿಂದ 2018–19ರಲ್ಲಿ ವಾರ್ಷಿಕ ಸಂಯೋಜಿತ ವಾರ್ಷಿಕ ಬೆಳವಣಿಗೆ ದರವು (ಶೇಕಡಾ 9.44) ಸಾಲ/ಋಣಕ್ಕಿಂತ (ಶೇಕಡಾ 24.94) ಕಡಿಮೆ ಪ್ರಮಾಣದಲ್ಲಿದ್ದುದರಿಂದ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಾಲ/ಋಣ ವಹಿವಾಟು ಅನುಪಾತವು ಉತ್ತಮಗೊಂಡಿರಲಿಲ್ಲ.

[106] ಇದು ರಾಜ್ಯ ಸರ್ಕಾರವು ಯಾವುದೇ ನೇರ ಹೂಡಿಕೆಯನ್ನು ಮಾಡಿರದ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಹಾಗೂ ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಒಳಗೊಂಡಿರುವುದಿಲ್ಲ.

## ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳನ್ನು (ವಿದ್ಯುತ್ ವಲಯವನ್ನು ಹೊರತುಪಡಿಸಿ) ಸಮಾಪನಗೊಳಿಸುವಿಕೆ

**4.17.1.** 31 ಮಾರ್ಚ್ 2019ರಲ್ಲಿದ್ದಂತೆ 13 ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳಿದ್ದವು[107] (ಎಲ್ಲಾ ಕಂಪನಿಗಳು). ಇವುಗಳ ಪೈಕಿ, ಐದು ಸಾರ್ವಜನಿಕ ವಲಯ ಉದ್ದಿಮೆಗಳು ಸಮಾಪನ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದವು.

ಮುಂದುವರೆದು, 13 ಕಾರ್ಯಸ್ಥಗಿತ ಕಂಪನಿಗಳು, ಕಂಪನಿಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕ್ರಮವನ್ನು ಕೈಗೊಳ್ಳುವ ಸಲುವಾಗಿ ನಿರ್ದೇಶಕರುಗಳ ಮಂಡಳಿಯನ್ನು ಪುನರ್-ರಚಿಸಿ ಕರ್ನಾಟಕ ಸರ್ಕಾರವು ಆದೇಶವನ್ನು ನೀಡಿದ್ದಂತಹ (ಜೂನ್ 2017) ಒಂದು ಕಂಪನಿಯನ್ನೂ (ಬೆಂಗಳೂರು ಸಬರ್ಬನ್ ರೈಲು ನಿಗಮ ನಿಯಮಿತ) ಸಹ ಒಳಗೊಂಡಿದ್ದವು. ಈ ಕಂಪನಿಯ ಮುಕ್ತಾಯಕ್ಕೆ ಔಪಚಾರಿಕ ಆದೇಶಗಳನ್ನು ಇನ್ನೂ ನೀಡಬೇಕಾಗಿದೆ (ಸೆಪ್ಟಂಬರ್ 2019).

ಕಳೆದ ಐದು ವರ್ಷಗಳಿಗೆ ಪ್ರತಿಯೊಂದು ವರ್ಷದ ಅಂತ್ಯದಲ್ಲಿ ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆಗಳನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 4.17: ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ವಿವರಗಳು**

| ಕ್ರಮ ಸಂಖ್ಯೆ | ವಿವರಗಳು | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|
| 1 | ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆ | 12 | 12 | 12 | 13 | 13 |

ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳು ರಾಜ್ಯದ ಆರ್ಥಿಕತೆಗೆ ಯಾವುದೇ ಕಾಣಿಕೆಯನ್ನೂ ನೀಡುವುದಿಲ್ಲವಾದ್ದರಿಂದ ಹಾಗೂ ಗುರಿಯಾಗಿಸಿಕೊಳ್ಳಲಾಗಿರುವ ಉದ್ದೇಶಗಳನ್ನು ಈಡೇರಿಸುವುದಿಲ್ಲವಾದ್ದರಿಂದ, ಈ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಮುಕ್ತಾಯಗೊಳಿಸುವುದನ್ನು ಪರಿಗಣಿಸಬೇಕು. 2018-19ರಲ್ಲಿ, ಹದಿಮೂರು ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಆರು ಸಾರ್ವಜನಿಕ ವಲಯ ಉದ್ದಿಮೆಗಳು ಆಡಳಿತಾತ್ಮಕ ವೆಚ್ಚಗಳ ಕಡೆಗೆ ₹ 39.07 ಕೋಟಿ[108] ವೆಚ್ಚವನ್ನು ಭರಿಸಿದ್ದವು. ಈ ವೆಚ್ಚಗಳಿಗೆ ಬಾಡಿಗೆ ಸ್ವೀಕೃತಿಗಳು, ಬಡ್ಡಿ ಸ್ವೀಕೃತಿಗಳು ಹಾಗೂ ಇತರೆ ಸ್ವೀಕೃತಿಗಳ ಮೂಲಕ ಹಣಕಾಸನ್ನು ಒದಗಿಸಲಾಗಿತ್ತು.

**4.17.2.** ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಮುಕ್ತಾಯದ ಹಂತಗಳನ್ನು ಈ ಕೆಳಗೆ ನೀಡಲಾಗಿದೆ;

**ಕೋಷ್ಟಕ ಸಂಖ್ಯೆ 4.18: ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಮುಕ್ತಾಯದ ಹಂತಗಳು**

| ಕ್ರಮ ಸಂಖ್ಯೆ | ವಿವರಗಳು | ಕಂಪನಿಗಳು |
|---|---|---|
| 1 | ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟು ಸಂಖ್ಯೆ | 13 |
| 2 | ಮೇಲಿನ (1)ರ ಪೈಕಿ: | |
| (ಎ) | ನ್ಯಾಯಾಲಯದಿಂದ ಸಮಾಪನ (ಸಮಾಪನಕಾರರನ್ನು ನೇಮಕ ಮಾಡಲಾಗಿದೆ) | 4[109] |
| (ಬಿ) | ಸಮಾಪನ ಪ್ರಕ್ರಿಯೆ ಹಿಂತೆಗೆದುಕೊಳ್ಳಲಾಗಿದೆ | 1[110] |
| | ಮುಕ್ತಾಯ, ಅಂದರೆ ಮುಕ್ತಾಯ ಆದೇಶಗಳನ್ನು/ನಿರ್ದೇಶನಗಳನ್ನು ನೀಡಲಾಗಿರುವುದು, ಆದರೆ ಸಮಾಪನ ಪ್ರಕ್ರಿಯೆಯು ಇನ್ನೂ ಪ್ರಾರಂಭಗೊಳ್ಳದಿರುವುದು | 8 |

[107] ***ಅನುಬಂಧ-4(ಬಿ)*** ಅನುಸಾರ – 11 ಸಾರ್ವಜನಿಕ ವಲಯ ಉದ್ದಿಮೆಗಳು ಸ್ಪರ್ಧಾತ್ಮಕ ಪರಿಸರದ ಅಡಿಯಲ್ಲಿ ಹಾಗೂ ಎರಡು ಸಾರ್ವಜನಿಕ ವಲಯ ಉದ್ದಿಮೆಗಳು ಇತರವುಗಳ ಅಡಿಯಲ್ಲಿದ್ದವು.

[108] ಕೆಎಐಸಿ (₹ 24.12 ಕೋಟಿ), ಎಂಟಿಸಿ (₹ 0.99 ಕೋಟಿ), ಕೆಪಿಎಲ್ (₹ 0.13 ಕೋಟಿ), ಎಂಎಲ್‌ಡಬ್ಲ್ಯೂ (₹ 13.73 ಕೋಟಿ), ವಿಎಸ್‌ಎಲ್ (₹ 0.06 ಕೋಟಿ) ಹಾಗೂ ಎಂಸಿಟಿ (₹ 0.04 ಕೋಟಿ).

[109] ಕೆಎಸ್‌ವಿಎಲ್, ಎಮ್‌ಸಿಎಲ್, ಕೆಟಿಎಲ್ ಮತ್ತು ಎಮ್‌ಎಸಿಸಿಎಲ್.

[110] ಕರ್ನಾಟಕ ಸರ್ಕಾರವು, ಯಾವುದೇ ಸಾಲದ ಬಾಕಿ ಇಲ್ಲದ್ದರಿಂದ ಎನ್‌ಜಿಇಎಫ್‌ನ್ನು ಮುಚ್ಚುವ ಆದೇಶವನ್ನು ಹಿಂಪಡೆಯಲು ನಿರ್ಧರಿಸಿತು ಮತ್ತು ಕಂಪನಿಯ ಭೂಮಿ ಮತ್ತು ಇತರೆ ಬೆಲೆಬಾಳುವ ಆಸ್ತಿಗಳನ್ನು ಸಾರ್ವಜನಿಕ ಯೋಜನೆಗಳಿಗೆ ಬಳಸಿಕೊಳ್ಳಲು ಉದ್ದೇಶಿಸಿತು. ಕರ್ನಾಟಕ ಸರ್ಕಾರದ ಅರ್ಜಿಯ ಮೇರೆಗೆ, ಈ ಮುಂಚೆ ಹೊರಡಿಸಿದ್ದ ಮುಕ್ತಾಯ ಆದೇಶವನ್ನು ಹಿಂಪಡೆಯಲು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಒಪ್ಪಿತು (ಜೂನ್ 2017).

ನ್ಯಾಯಾಲಯದ ಆದೇಶದ ಮೂಲಕ ಸಮಾಪನಗೊಳಿಸುವ ಮಾರ್ಗವನ್ನು ಆಯ್ಕೆ ಮಾಡಿಕೊಂಡಿರುವ ಕಂಪನಿಗಳು ಹದಿನಾಲ್ಕರಿಂದ ಹದಿನಾರು ವರ್ಷಗಳ ಅವಧಿಯವರೆಗೂ ಸಮಾಪನ ಪ್ರಕ್ರಿಯೆಯ ಅಡಿಯಲ್ಲಿರುತ್ತವೆ. ಕಂಪನಿಗಳ ಅಧಿನಿಯಮದ ಅಡಿಯಲ್ಲಿ ಸಮಾಪನಗೊಳಿಸುವುದಕ್ಕಾಗಿನ ಸ್ವಯಂ–ಆಯ್ಕೆಯ ಪ್ರಕ್ರಿಯೆಯು ಬಹಳಷ್ಟು ತ್ವರಿತವಾಗಿರುತ್ತದೆ ಹಾಗೂ ಅದನ್ನು ಅಳವಡಿಸಿಕೊಳ್ಳಲು ಪರಿಶೋಧಿಸುವ ಅಗತ್ಯತೆಯಿರುತ್ತದೆ.

## ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಲೆಕ್ಕಪತ್ರಗಳ ಮೇಲಿನ ಟೀಕೆಟಿಪ್ಪಣಿಗಳು

**4.18.1.** ಕಾರ್ಯನಿರತ ಎಪ್ಪತ್ತು ಸಾರ್ವಜನಿಕ ವಲಯ ಉದ್ದಿಮೆಗಳು (ವಿದ್ಯುತ್ ವಲಯವನ್ನು ಹೊರತುಪಡಿಸಿ) ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ತಮ್ಮ 90 ಲೆಕ್ಕಪತ್ರಗಳನ್ನು ಮಹಾಲೇಖಾಪಾಲರಿಗೆ 1 ಅಕ್ಟೋಬರ್ 2018 ಮತ್ತು 30 ಸೆಪ್ಟಂಬರ್ 2019ರ ನಡುವಿನ ಅವಧಿಯಲ್ಲಿ ಕಳುಹಿಸಿಕೊಟ್ಟವು. ಇವುಗಳ ಪೈಕಿ, 64 ಲೆಕ್ಕಪತ್ರಗಳನ್ನು (54 ಕಂಪನಿಗಳ) ಪೂರಕ ಲೆಕ್ಕಪರಿಶೋಧನೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು. ಶಾಸನಬದ್ಧ ಲೆಕ್ಕಪರಿಶೋಧಕರುಗಳು (ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡಿರುವ) ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪೂರಕ ಲೆಕ್ಕಪರಿಶೋಧನೆಗಳು ಲೆಕ್ಕಪತ್ರಗಳ ನಿರ್ವಹಣೆಯ ಗುಣಮಟ್ಟವನ್ನು ಉತ್ತಮಗೊಳಿಸುವ ಅಗತ್ಯತೆಯಿರುತ್ತದೆ ಎಂಬುದನ್ನು ಸೂಚಿಸುತ್ತಿದ್ದವು. ಶಾಸನಬದ್ಧ ಲೆಕ್ಕಪರಿಶೋಧಕರುಗಳ ಮತ್ತು ಭಾರತದ ಲೆಕ್ಕನಿಯಂತ್ರಕರ ಟೀಕೆಟಿಪ್ಪಣಿಗಳ ಒಟ್ಟಾರೆ ಹಣಕಾಸಿನ ಮೌಲ್ಯವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 4.19: ಕಾರ್ಯನಿರತ ಕಂಪನಿಗಳ ಮೇಲೆ ಲೆಕ್ಕಪರಿಶೋಧನೆಯ ಟೀಕೆಟಿಪ್ಪಣಿಗಳ ಪ್ರಭಾವ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2016–17 | | 2017–18 | | 2018–19 | |
|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಲಾಭದಲ್ಲಿ ಇಳಿಕೆ (ಲೆಕ್ಕಪತ್ರಗಳು) | 11 | 505.90 | 16 | 300.12 | 17 | 374.60 |
| 2 | ಲಾಭದಲ್ಲಿ ಹೆಚ್ಚಳ (ಲೆಕ್ಕಪತ್ರಗಳು) | 4 | 13.07 | 2 | 17.43 | 5 | 9.49 |
| 3 | ನಷ್ಟದಲ್ಲಿ ಇಳಿಕೆ (ಲೆಕ್ಕಪತ್ರಗಳು) | 1 | 0.57 | 2 | 7.29 | 4 | 286.92 |
| 4 | ನಷ್ಟದಲ್ಲಿ ಹೆಚ್ಚಳ (ಲೆಕ್ಕಪತ್ರಗಳು) | 6 | 36.39 | 5 | 37.58 | 4 | 4.29 |
| 5 | ವಿಷಯಕ ವಾಸ್ತವಾಂಶಗಳನ್ನು ಬಹಿರಂಗ ಪಡಿಸದಿದ್ದುದು (ದೃಷ್ಟಾಂತಗಳು) | 1 | – | 2 | – | 20 | – |
| 6 | ವರ್ಗೀಕರಣದಲ್ಲಿನ ತಪ್ಪುಗಳು/ದೋಷಗಳು (ದೃಷ್ಟಾಂತಗಳು) | – | – | 3 | – | 24 | – |

2018–19ರ ಸಾಲಿನಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರುಗಳು 31 ಲೆಕ್ಕಪತ್ರಗಳ ಮೇಲೆ ಷರತ್ತುರಹಿತ ವರದಿಗಳನ್ನು ನೀಡಿದ್ದರು, 57 ಲೆಕ್ಕಪತ್ರಗಳ ಮೇಲೆ ಷರತ್ತುಬದ್ಧ ವರದಿಗಳನ್ನು ಹಾಗೂ ಎರಡು ಲೆಕ್ಕಪತ್ರಗಳ ಮೇಲೆ ನಕಾರಾತ್ಮಕ ವರದಿಗಳನ್ನು (ಲೆಕ್ಕಪತ್ರಗಳು ಒಂದು ನ್ಯಾಯಸಮ್ಮತ ಹಾಗೂ ಸತ್ಯಾಸತ್ಯತೆಯಿಂದ ಕೂಡಿದ ಸ್ಥಿತಿಗತಿಗಳನ್ನು ಪ್ರಕ್ಷೇಪಿಸುತ್ತಿರುವುದಿಲ್ಲ ಎಂಬುದಾಗಿ ಅರ್ಥೈಸುವ) ನೀಡಿದ್ದರು. ಪ್ರಸಕ್ತ ಸಾಲಿನಲ್ಲಿ 30 ಲೆಕ್ಕಪತ್ರಗಳಲ್ಲಿ ಅನುಸರಿಸದಿರುವ 83 ದೃಷ್ಟಾಂತಗಳು ಇದ್ದವಾದ್ದರಿಂದ ಕಂಪನಿಗಳು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳನ್ನು ಅನುಸರಿಸುತ್ತಿದ್ದುದು ಬಹಳ ನಿಕೃಷ್ಟ ಮಟ್ಟದಲ್ಲಿತ್ತು.

**4.18.2.** ಅದೇ ರೀತಿಯಲ್ಲಿ ಐದು ಕಾರ್ಯನಿರತ ಶಾಸನಬದ್ಧ ನಿಗಮಗಳು ತಮ್ಮ ಐದು ಲೆಕ್ಕಪತ್ರಗಳನ್ನು ಮಹಾಲೇಖಾಪಾಲರಿಗೆ 2018–19ರಲ್ಲಿ ಕಳುಹಿಸಿದ್ದವು. ಇವುಗಳ ಪೈಕಿ, ನಾಲ್ಕು ಶಾಸನಬದ್ಧ ನಿಗಮಗಳಿಗೆ ಸಂಬಂಧಿತ ನಾಲ್ಕು ಲೆಕ್ಕಪತ್ರಗಳು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಏಕೈಕ ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದಿತಾದಲ್ಲಿ ಮಿಕ್ಕ ಒಂದು ಕಂಪನಿಯು (ಕೆಎಸ್ಎಫ್‌ಸಿ) ಶಾಸನಬದ್ಧ ಲೆಕ್ಕಪರಿಶೋಧಕರ ಲೆಕ್ಕಪರಿಶೋಧನೆಯ ನಂತರ ಪೂರಕ ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದವು. ಶಾಸನಬದ್ಧ ಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಗಳು ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು

ಮಹಾಲೆಕ್ಕಪರಿಶೋಧಕರ ಏಕೈಕ/ಪೂರಕ ಲೆಕ್ಕಪರಿಶೋಧನೆಯು ಲೆಕ್ಕಪತ್ರಗಳ ನಿರ್ವಹಣೆಯ ಗುಣಮಟ್ಟವು ಉತ್ತಮಗೊಳ್ಳಬೇಕೆಂಬುದನ್ನು ಸೂಚಿಸುತ್ತವೆ. ಶಾಸನಬದ್ಧ ಲೆಕ್ಕಪರಿಶೋಧಕರು ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳಲ್ಲಿನ ಒಟ್ಟಾರೆ ಹಣಕಾಸಿನ ಮೌಲ್ಯದ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 4.20: ಶಾಸನಬದ್ಧ ನಿಗಮಗಳ ಮೇಲೆ ಲೆಕ್ಕಪರಿಶೋಧನಾ ಟೀಕೆಟಿಪ್ಪಣಿಗಳ ಪ್ರಭಾವ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2016–17 | | 2017–18 | | 2018–19 | |
|---|---|---|---|---|---|---|---|
| | | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ |
| 1 | ಲಾಭದಲ್ಲಿನ ಇಳಿಕೆ | 3 | 17.95 | 2 | 3.77 | 2 | 14.32 |
| 2 | ಲಾಭದಲ್ಲಿನ ಹೆಚ್ಚಳ | 1 | 116.10 | – | – | – | – |
| 3 | ನಷ್ಟದಲ್ಲಿನ ಇಳಿಕೆ | 1 | 0.27 | – | – | 1 | 0.57 |
| 4 | ನಷ್ಟದಲ್ಲಿನ ಹೆಚ್ಚಳ | 1 | 2.67 | 4 | 148.06 | 2 | 1.08 |

ಪ್ರಸಕ್ತ ಸಾಲಿನಲ್ಲಿ, ಎಲ್ಲಾ ಐದು ಲೆಕ್ಕಪತ್ರಗಳ ಮೇಲೆ ಷರತ್ತುಬದ್ಧ ಪ್ರಮಾಣಪತ್ರಗಳನ್ನು ನೀಡಲಾಗಿತ್ತು. ಎರಡು ಶಾಸನಬದ್ಧ ನಿಗಮಗಳು ₹ 30.05 ಕೋಟಿ ಮೊತ್ತದಷ್ಟು ಒಟ್ಟಾರೆ ಲಾಭವನ್ನು ವರದಿ ಮಾಡಿದ್ದವಾದಲ್ಲಿ, ಮೂರು ನಿಗಮಗಳು ₹ 322.90 ಕೋಟಿ ಮೊತ್ತದಷ್ಟು ನಷ್ಟಗಳನ್ನು ವರದಿ ಮಾಡಿದ್ದವು.

## ಲೆಕ್ಕಪರಿಶೋಧನೆಯ ಬಗ್ಗೆ ಸರ್ಕಾರದ ಪ್ರತಿಕ್ರಿಯೆ

***ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಅನುಪಾಲನಾ ಲೆಕ್ಕಪರಿಶೋಧನೆಗಳ ಕಂಡಿಕೆಗಳು***

**4.19.** ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಒಂದು ಸಾಧನಾ ಲೆಕ್ಕಪರಿಶೋಧನೆ ಮತ್ತು ಮೂರು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ಉತ್ತರಗಳನ್ನು ಒದಗಿಸುವ ಸಲುವಾಗಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ ಅಥವಾ ಸಂಬಂಧಿತ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ ನೀಡಲಾಗಿತ್ತು. ಸಾಧನಾ ಲೆಕ್ಕಪರಿಶೋಧನೆ ಹಾಗೂ ಒಂದು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಯಿತು. ಎರಡು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ **(ಕಂಡಿಕೆ 6.1 ಮತ್ತು 6.2)** ಸರ್ಕಾರದಿಂದ ಭಾಗಶಃ ಉತ್ತರವನ್ನು ಸ್ವೀಕರಿಸಲಾಗಿದೆ (ಸೆಪ್ಟಂಬರ್ 2020). ಸರ್ಕಾರದ ಅಭಿಪ್ರಾಯಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳಲಾಗಿದೆ.

## ಲೆಕ್ಕಪರಿಶೋಧನಾ ವರದಿಗಳ ಮೇಲೆ ಅನುಸರಣಾ ಕ್ರಮಗಳು

***ಬಾಕಿಯಿರುವ ಉತ್ತರಗಳು***

**4.20.** ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳು ಲೆಕ್ಕಪರಿಶೋಧನಾ ಪರಿಶೀಲನೆಯ ಪ್ರಕ್ರಿಯೆಯು ಮುಕ್ತಾಯಗೊಳ್ಳುವುದನ್ನು ಪ್ರತಿನಿಧಿಸುತ್ತವೆ. ಆದ್ದರಿಂದ ಅವುಗಳು ಕಾರ್ಯಾಂಗದ ಸೂಕ್ತ ಮತ್ತು ಸಮಯೋಚಿತ ಪ್ರತಿಕ್ರಿಯೆಯನ್ನು ಹೊರಸೆಳೆಯುವುದು ಅತ್ಯಗತ್ಯವಾಗಿರುತ್ತದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವಂತಹ ಕಂಡಿಕೆಗಳು ಮತ್ತು ಸಾಧನಾ ಲೆಕ್ಕಪರಿಶೋಧನೆಗಳಿಗೆ, ಅವುಗಳನ್ನು ಶಾಸನ ಸಭೆಯ ಮುಂದೆ ಮಂಡಿಸಲಾದ ದಿನಾಂಕದಿಂದ ಮೂರು ತಿಂಗಳುಗಳ ಒಳಗಿನ ಅವಧಿಯಲ್ಲಿ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯಿಂದ ಯಾವುದೇ ಪ್ರಶ್ನಾವಳಿಗಳಿಗೂ ನಿರೀಕ್ಷಿಸದೆಯೇ ಉತ್ತರಗಳನ್ನು ಸಲ್ಲಿಸುವಂತೆ ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯು ಎಲ್ಲಾ ಆಡಳಿತಾತ್ಮಕ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಿತ್ತು (ಜನವರಿ 1974). ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗೆ ಕರ್ನಾಟಕ ಸರ್ಕಾರದಿಂದ ಉತ್ತರಗಳ ಸ್ವೀಕೃತಿಯ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 4.21: 30 ಸೆಪ್ಟಂಬರ್ 2019ರಲ್ಲಿದ್ದಂತೆ ಉತ್ತರಗಳು ಸ್ವೀಕೃತಗೊಳ್ಳದಿರುವುದು**

| ಕ್ರ. ಸಂ. | ಲೆಕ್ಕಪರಿಶೋಧನಾ ವರದಿಯ ಸಾಲು | ರಾಜ್ಯ ಶಾಸನ ಸಭೆಯ ಮುಂದೆ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸಿದ ದಿನಾಂಕ | ಲೆಕ್ಕಪರಿಶೋಧನಾ ವರದಿಯಲ್ಲಿ ಒಟ್ಟು ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳು | | ಉತ್ತರಗಳನ್ನು ಸ್ವೀಕರಿಸದಿರುವ ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳು | |
|---|---|---|---|---|---|---|
| | | | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು |
| 1 | 2016–17 | 22.02.2018 | 1 | 10 | 0 | 2 |
| | ಒಟ್ಟು | | **1** | **10** | **0** | **2** |

ಎರಡು ಇಲಾಖೆಗಳಿಗೆ[111] ಸಂಬಂಧಿಸಿದಂತೆ ಎರಡು ಕಂಡಿಕೆಗಳಿಗೆ ಕರ್ನಾಟಕ ಸರ್ಕಾರವು ಉತ್ತರಗಳನ್ನು ಸಲ್ಲಿಸಿರುವುದಿಲ್ಲ (ಸೆಪ್ಟಂಬರ್ 2019) ಎಂಬುದನ್ನು ಗಮನಿಸಬಹುದು.

***ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯಿಂದ ಲೆಕ್ಕಪರಿಶೋಧನಾ ವರದಿಗಳ ಚರ್ಚೆ***

**4.21.** 30 ಸೆಪ್ಟಂಬರ್ 2019ರಲ್ಲಿದ್ದಂತೆ ಸಾರ್ವಜನಿಕ ವಲಯ ಉದ್ದಿಮೆಗಳ (ವಿದ್ಯುತ್ ವಲಯವನ್ನು ಹೊರತುಪಡಿಸಿ) ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವಂತಹ ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯಲ್ಲಿ ಚರ್ಚಿಸಲಾಗಿರುವಂತಹ ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

**ಕೋಷ್ಟಕ ಸಂಖ್ಯೆ 4.22: ಚರ್ಚಿಸಲಾಗಿರುವಂತಹ ಸಾಧನಾ ಲೆಕ್ಕಪರಿಶೋಧನೆಗಳು ಹಾಗೂ ಕಂಡಿಕೆಗಳ ಸ್ಥಿತಿಗತಿ**

| ಕ್ರ. ಸಂ. | ಲೆಕ್ಕಪರಿಶೋಧನಾ ವರದಿಯ ಅವಧಿ | ಸಾಧನಾ ಲೆಕ್ಕಪರಿಶೋಧನೆಗಳು/ಕಂಡಿಕೆಗಳ ಸಂಖ್ಯೆ | | | |
|---|---|---|---|---|---|
| | | ಲೆಕ್ಕಪರಿಶೋಧನಾ ವರದಿಯಲ್ಲಿ ಪ್ರಕಟಗೊಂಡಿರುವುದು | | ಚರ್ಚಿಸಲಾಗಿರುವ ಕಂಡಿಕೆಗಳು | |
| | | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು |
| 1 | 2012-13 | 2 | 6 | 2 | 5 |
| 2 | 2015-16 | 1 | 10 | 1 | 6 |
| 3 | 2016-17 | 1 | 10 | 0 | 5 |
| | ಒಟ್ಟು | **4** | **26** | **3** | **16** |

**ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ವರದಿಗಳ ಮೇಲೆ ಅನುಸರಣಾ ಕ್ರಮಗಳು**

**4.22.** ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ವರದಿಗಳು (ವರದಿ ಸಂ.127, 128 ಮತ್ತು 130), ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳಲ್ಲಿ 2008–09 ಹಾಗೂ 2014–15ರ ನಡುವಿನ ಅವಧಿಯಲ್ಲಿ ಪ್ರಕಟಗೊಂಡಿದ್ದ ಮೂರು ಇಲಾಖೆಗಳ[112] ಕುರಿತ ಕಂಡಿಕೆಗಳಿಗೆ ಸಂಬಂಧಿಸಿದಂತೆ 24 ಶಿಫಾರಸುಗಳನ್ನು ಹಾಗೂ ಸ್ವಯಂ–ನಿರ್ಣಯದ ಆಧಾರದ ಮೇರೆಗೆ ನೀಡಲಾಗಿದ್ದ ಐದು ವರದಿಗಳ (ವರದಿ ಸಂ.125, 129, 131 132 ಮತ್ತು 133) 52 ಶಿಫಾರಸುಗಳನ್ನು ಒಳಗೊಂಡಿದ್ದವು. ಈ ವರದಿಗಳನ್ನು ರಾಜ್ಯ ಶಾಸಕಾಂಗದ ಮುಂದೆ ಡಿಸೆಂಬರ್ 2011 ಮತು ಫೆಬ್ರವರಿ 2018ರ ನಡುವೆ ಮಂಡಿಸಲಾಯಿತು.

ಮೇಲೆ ತಿಳಿಸಿದ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ಮೂರು ವರದಿಗಳ ಮೂರು ಕಂಡಿಕೆಗಳಿಗೆ ಮತ್ತು ಸ್ವಯಂ–ನಿರ್ಣಯದ ಆಧಾರದ ಮೇರೆಗೆ ನೀಡಲಾಗಿದ್ದ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ಐದು ವರದಿಗಳ ಮೇಲೆ ಕರ್ನಾಟಕ ಸರ್ಕಾರದಿಂದ ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಟಿಪ್ಪಣಿಗಳು (ಎಟಿಎನ್) ಇನ್ನೂ ಸ್ವೀಕೃತಗೊಂಡಿರುವುದಿಲ್ಲ (ಸೆಪ್ಟಂಬರ್ 2019).

[111] ಹಣಕಾಸು ಇಲಾಖೆ ಮತ್ತು ಜಲ ಸಂಪನ್ಮೂಲಗಳ ಇಲಾಖೆ

[112] ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ.

**ಕಂಡಿಕೆಗಳು/ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ಶಿಫಾರಸುಗಳ ಮೇಲಿನ ಎಟಿಎನ್‌ಗಳಿಗೆ ನಿರ್ದಿಷ್ಟ ಕಾಲಮಿತಿಯೊಳಗೆ ಉತ್ತರಗಳನ್ನು ಕಳುಹಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.**

### ಪರೀಕ್ಷಣಾ ವರದಿಗಳಿಗೆ ಪ್ರತಿಕ್ರಿಯೆ

**4.23.** ಲೆಕ್ಕಪರಿಶೋಧನೆಯ ಸಮಯದಲ್ಲಿ ಗಮನಿಸಲಾದ ಆದರೆ ಆ ವೇಳೆಗೆ ತತ್‌ಕ್ಷಣದಲ್ಲಿ ಇತ್ಯರ್ಥಪಡಿಸಲಾಗದ ಅಂಶಗಳನ್ನು ಸಾರ್ವಜನಿಕ ವಲಯ ಉದ್ದಿಮೆಗಳ ಮುಖ್ಯಸ್ಥರುಗಳಿಗೆ ಹಾಗೂ ರಾಜ್ಯ ಸರ್ಕಾರದ ಸಂಬಂಧಿತ ಇಲಾಖೆಗಳಿಗೆ ಪರೀಕ್ಷಣಾ ವರದಿಗಳ ಮೂಲಕ ಗಮನಕ್ಕೆ ತರಲಾಗುವುದು. ಸಾರ್ವಜನಿಕ ವಲಯ ಉದ್ದಿಮೆಗಳ ಮುಖ್ಯಸ್ಥರುಗಳು ಒಂದು ತಿಂಗಳಿನ ಒಳಗೆ ಸಂಬಂಧಿತ ಇಲಾಖೆಗಳ ಮುಖ್ಯಸ್ಥರುಗಳ ಮೂಲಕ ಪರೀಕ್ಷಣಾ ವರದಿಗಳಿಗೆ ಉತ್ತರಗಳನ್ನು ಕಳುಹಿಸುವ ಅಗತ್ಯತೆಯಿರುತ್ತದೆ. 31 ಮಾರ್ಚ್ 2019ರಲ್ಲಿದ್ದಂತೆ ಬಾಕಿಯಿರುವ ಪರೀಕ್ಷಣಾ ವರದಿಗಳು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳ ಇಲಾಖಾವಾರು ವಿಭಜನೆಯನ್ನು ***ಅನುಬಂಧ–6 (ಕ್ರ. ಸಂ. 2 ರಿಂದ 21)***ರಲ್ಲಿ ನೀಡಲಾಗಿದೆ.

**(ಎ) ಸರ್ಕಾರವು ರಚಿಸಿರುವಂತಹ ಲೆಕ್ಕಪರಿಶೋಧನಾ ಮೇಲ್ವಿಚಾರಣಾ ಕೋಶದ ವರದಿಗಳ ಆಧಾರದ ಮೇರೆಗೆ ಪರೀಕ್ಷಣಾ ವರದಿಗಳಿಗೆ ಪ್ರತಿಕ್ರಿಯೆ ನೀಡುವಲ್ಲಿ ವಿಫಲರಾಗುವಂತಹ ಅಧಿಕಾರಿಗಳ/ಸಿಬ್ಬಂದಿಗಳ ಪ್ರತಿಯಾಗಿ ಕ್ರಮ ಕೈಗೊಳ್ಳಲು ಹಾಗೂ (ಬಿ) ನಷ್ಟಗಳು/ಬಾಕಿಯಿರುವ ಮುಂಗಡಗಳು/ಮಿತಿಮೀರಿದಂತೆ ಮಾಡಲಾಗಿರುವ ಪಾವತಿಗಳನ್ನು ವಸೂಲಾತಿ ಮಾಡಲು ಒಂದು ಕಾರ್ಯವಿಧಾನವು ಇರುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.**